सत्यमेव जयते

ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

ಕರ್ನಾಟಕ ಅಧಿನಿಯಮ ಸಂ. 1961ರ 14

# ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961

# ಮತ್ತು

# ಅದರ ಮೇರೆಗಿನ ನಿಯಮಗಳು

1984

ಕರ್ನಾಟಕ ಅಧಿನಿಯಮ ಸಂ. 1961ರ 14

# ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961

# ಮತ್ತು

# ಅದರ ಮೇರೆಗಿನ ನಿಯಮಗಳು

1984

# ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961

# ಮತ್ತು

# ಅದರ ಮೇರೆಗಿನ ನಿಯಮಗಳು

**(1978ರ ಸೆಪ್ಟೆಂಬರ್ 30ರ ವರೆಗೆ ತಿದ್ದುಪಡಿಯಾದಂತೆ)**

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

**ಅಧಿಸೂಚನೆ**

**ಕ್ರಮಾಂಕ ನಂ. ಲಾ 12 ಎಲ್ಎಂಪಿ 92, ದಿನಾಂಕ:10ನೇ ಏಪ್ರಿಲ್ 1992**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಖುರ್ಷಿದ್ ಆಲಂ ಖಾನ್ ಎಂಬ ನಾನು, ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ ಸಂಖ್ಯೆ 1961ರ 14) ಮತ್ತು ಅದರ ಮೇರೆಗಿನ ನಿಯಮಗಳು ಇದರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕುದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಖುರ್ಷಿದ್ ಆಲಂ ಖಾನ್,**
ಕರ್ನಾಟಕ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಹೆಚ್.ಕೆ. ರಾಜಪುರೋಹಿತ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ (ಪ್ರಕಟಣೆಗಳು).

## ಒಳಾಂಶಗಳು


| | | | |
|---|---|---|---|
| 1. | ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961, | – | 1 |
| 2. | ಅಧಿನಿಯಮವನ್ನು ಜಾರಿಗೆ ತರುವ ಅಧಿಸೂಚನೆ ಸಂಖ್ಯೆ ಆರ್ ಡಿ 327 ಜಿಒವಿ 62, ದಿನಾಂಕ:9.1.1963 | – | 1 |
| 3. | ಕರ್ನಾಟಕ ಗ್ರಾಮಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1967 | – | 13 |
| 4. | ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1978 | – | 14 |
| 5. | ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1984 | – | 16 |
| 6. | ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ನಿಯಮಗಳು, 1961 | – | 16 |
| 7. | ಕರ್ನಾಟಕ ಸಾಮಾನ್ಯ ಸೇವಾ (ಕಂದಾಯ ಅಧೀನ ಶಾಖೆ) ಗ್ರಾಮ ಲೆಕ್ಕಿಗರ (ನೌಕರು ಭರ್ತಿ) ನಿಯಮಗಳು, 1970. | – | 24 |

# ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961

## ಪ್ರಕರಣಗಳ ಅನುಕ್ರಮಣಿಕೆ

### ಪ್ರಸ್ತಾವನೆ

**ಪ್ರಕರಣಗಳು**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ,

2. ಪರಿಭಾಷೆಗಳು,

3. ಕೆಲವು ಪ್ರಶ್ನೆಗಳನ್ನು ಮತ್ತು ಅಪೀಲುಗಳನ್ನು ತೀರ್ಮಾನಿಸಲು ಡೆಪ್ಯೂಟಿ ಕಮೀಷನರ ಅಧಿಕಾರಗಳು.

4. ಗ್ರಾಮ ಹುದ್ದೆಗಳಿಗೆ ಅನುಗತವಾಗಿ ಬರುವ ಹಕ್ಕುಗಳೊಂದಿಗೆ ಅವುಗಳ ರದ್ದಿಯಾತಿ

5. 4ನೇ ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಭೂಮಿಯನ್ನು ಗ್ರಾಮಹುದ್ದೆಯ ಧಾರಕನಿಗೆ ಪುನಃ ಮಂಜೂರು ಮಾಡುವುದು.

6. 4ನೇ ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಭೂಮಿಯನ್ನು ಅಧಿಕೃತಗೊಳಿಸಿದ ಹಿಡುವಳಿದಾರರಿಗೆ ಮರು ಮಂಜೂರಾತಿ.

7. ಅನಧಿಕೃತ ಹಿಡುವಳಿದಾರರನ್ನು ಹೊರಹಾಕುವುದು ಇತ್ಯಾದಿ

7ಕ. ವರ್ಗಾವಣೆ ಇತ್ಯಾದಿಗಳ ಮೇಲೆ ಪರಿಬಂಧ

8. ಗೇಣಿ ಕಾನೂನಿನ ಅನ್ವಯ,

9. ಗ್ರಾಮ ಹುದ್ದೆಯ ಧಾರಕನಿಗೆ ಪರಿಹಾರ

10. ವಿಚಾರಣೆಗಳು ಮತ್ತು ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕುದು.

11. ನಿಯಮಗಳು,

12. ನಿರಸನ ಮತ್ತು ಉಳಿಸುವಿಕೆಗಳು.

**ಕರ್ನಾಟಕ ಅಧಿನಿಯಮ 1961 ರ ಸಂಖ್ಯೆ 14**

(1961ನೇ ಜುಲೈ ಇಪ್ಪತ್ತನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

**ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961**

(ಕರ್ನಾಟಕ ಅಧಿನಿಯಮ 1968ರ ಸಂಖ್ಯೆ 8, ಅಧಿನಿಯಮ 1978ರ ಸಂಖ್ಯೆ 13 ಮತ್ತು 1984ರ 27 ಇವುಗಳ ಮೂಲಕ ತಿದ್ದುಪಡಿಯಾದಂತೆ)

(1961ರ ಜುಲೈ ಎಂಟನೇ ದಿವಸದಂದು ರಾಷ್ಟ್ರಪತಿಯವರ ಅನುಮೋದನೆಯನ್ನು ಪಡೆಯಿತು)

**ಕರ್ನಾಟಕ ರಾಜ್ಯದಲ್ಲಿನ ಗ್ರಾಮ ಹುದ್ದೆಗಳನ್ನು ರದ್ದುಗೊಳಿಸುವ ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಅನುವಂಶಿಕವಾಗಿ ಧಾರಣ ಮಾಡಿದ್ದಂಥ ಗ್ರಾಮ ಹುದ್ದೆಗಳನ್ನು ಮತ್ತು ಅವುಗಳಿಗೆ ಸಂಬಂಧಪಟ್ಟ ಉಪಲಬ್ದಿಗಳನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ರದ್ದುಗೊಳಿಸುವುದು ಮತ್ತು ಅವುಗಳಿಗೆ ತತ್ಪರಿಣಾಮವಾದ ಮತ್ತು ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಮದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ. 1961 ಎಂದ ಉಕರೆಯತಕ್ಕುದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

1. ಅಧಿನಿಯಮವು 1963ರ ಫೆಬ್ರವರಿ 11 ರಂದು ಜಾರಿಗೆ ಬಂದಿದೆ 1963ರ ಜನವರಿ 9ನೇ ದಿನಾಂಕ ಅಧಿಸೂಚನೆ ಆರ್ ಡಿ 327 ಜಿವಿಡಿ 62 ಇದನ್ನು ನೋಡಿ

**2. ಪರಿಭಾಷೆ.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) "ಗೊತ್ತುಪಡಿಸಿದ ದಿನಾಂಕ" ಎಂದರೆ 1ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆ ಗೊತ್ತುಪಡಿಸಿದ ದಿನಾಂಕ ;

(ಖ) "ಅಧಿಕೃತ ಹಿಡುವಳಿದಾರ" ಎಂದರೆ ರಾಜ್ಯವು ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿ ಅಥವಾ ಲಗತ್ತಿಸಲಾದ ಭೂಮಿ ಅಥವಾ ಅದರ ಭಾಗವನ್ನು ಯಾರ ಹೆಸರಿಗೆ, ಅಂಥ ಗ್ರಾಮ ಹುದ್ದೆಗಳಿಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಮಾರಾಟ, ದಾನ ವಿಭಾಗದ ಮೂಲವಾಗಿಯೇ ಆಗಲಿ ಅಥವಾ ಅನ್ಯಥಾ ಆಗಲಿ ಸಿಂಧೂವಾಗಿ ಶಾಶ್ವತವಾಗಿ ಪರಭಾರೆ ಮಾಡಲಾಗಿದೆಯೋ ಆ ವ್ಯಕ್ತಿ;

(ಗ) "ಸಂಹಿತೆ" ಎಂದರೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964;

(ಘ) "ಡೆಪ್ಯೂಟಿ ಕಮೀಷನರ್" ಎಂದರೆ ಈ ಅಧಿನಿಯಮದ ಮೇರೆಗೆ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಡೆಪ್ಯೂಟಿ ಕಮೀಷನರ್‌ನ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಅಧಿಕಾರಗಳನ್ನು ಚಲಾಯಿಸಲು, ರಾಜ್ಯ ಸರ್ಕಾರವು ನೇಮಕ ಮಾಡಿರದಿದ್ದರೆ, ಆ ಜಿಲ್ಲೆಯ ಡೆಪ್ಯೂಟಿ ಕಮೀಷನರ್ ;

(ಜ) "ಉಪಲಬ್ದಿಗಳು" ಎಂದರೆ ರಾಜ್ಯ ಸರ್ಕಾರವು, ಯಾವುದೇ ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಲಾದ–,

(i) ಭೂಮಿಗಳು;

(ii) ಭೂಮಿಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಕಂದಾಯ ವಹಿಸಿಕೊಡುವಿಕೆಗಳು :

(iii) ಹಣದ ಅಥವಾ ಕೃಷಿ ಉತ್ಪನ್ನದ ರೂಪದಲ್ಲಿನ ಶುಲ್ಕಗಳು

(iv) ಹಣ, ಸಂಬಳಗಳು ಮತ್ತು ಇತರ ಬಗೆಗಳ ಎಲ್ಲಾ ಪರಿಶ್ರಮಧನ.

(ಜಕ) "ಮುಕ್ತಗೊಂಡ ಇನಾಮು" ಎಂದರೆ ಮದ್ರಾಸು ಮುಕ್ತಗೊಳಿಸಿದ ಇನಾಮುಗಳ ಅಧಿನಿಯಮ, 1862 (ಮದ್ರಾಸು ಅಧಿನಿಯಮ 1962ರ ಸಂಖ್ಯೆ IV ) ದ ಮೇರೆಗೆ ಅಗತ್ಯಪಡಿಸಿದಂತೆ ಮುಕ್ತಗೊಳಿಸುವಿಕೆಯ ಬಗ್ಗೆ ರುಜುವಾತು ಇರುವಂಥ ಇನಾಮು;

(ಚ) "ಗ್ರಾಮ ಹುದ್ದೆಗೆ ಸಂಬಂಧಪಟ್ಟಂತೆ, ಅಸ್ತಿತ್ವದಲ್ಲಿರುವ ಕಾನೂನು " ಎಂಬುದು ಒಂದು ಗ್ರಾಮ ಹುದ್ದೆಯ ಸಂಬಂಧದಲ್ಲಿ ಗೊತ್ತುಪಡಿಸಿದ ದಿನಾಂಕ ನಿಕಟಪೂರ್ವದಲ್ಲಿ ಜಾರಿಯಲ್ಲಿರಬಹುದಾದಂಥ ಗ್ರಾಮ ಹುದ್ದೆಗೆ ಸಂಬಂಧಪಟ್ಟ ಯಾವುದೇ ಅಧಿನಿಯಮಿತಿ, ಅಧ್ಯಾದೇಶ, ನಿಯಮ ಉಪವಿಧಿ, ವಿನಿಯಮ, ಆದೇಶ, ಅಧಿಸೂಚನೆ, ಫರ್ಮಾನ್, ಹುಕುಮ್, ವಟಹುಕುಮ್ ಅಥವಾ ಯಾವುದೇ ಇತರ ಲಿಖಿತ ಅಥವಾ ಕಾನೂನಿನ ಬಲವನ್ನು ಹೊಮದಿರುವ ಯಾವುದೇ ರೂಢಿ ಅಥವಾ ಆಚರಣೆಯನ್ನು ಒಳಗೊಳ್ಳುತ್ತದೆ;

(ಛ) "ಗ್ರಾಮ ಹುದ್ದೆಯ ಧಾರಕ" ಅಥವಾ "ಧಾರಕ" ಎಂದರೆ ಅಂಥ ಹುದ್ದೆಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಗ್ರಾಮ ಹುದ್ದೆಯಲ್ಲಿ ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿ;

ಪರಂತು, ಆ ಗ್ರಾಮ ಹುದ್ದೆಯಲ್ಲಿ ಹಿತಸಕ್ತಿಯನ್ನು ಹೊಂದಿರುವ ಇಡೀ ಗುಂಪು ಧಾರಣ ಮಾಡಿರುವಂತೆ ಅಂಥ ಗ್ರಾಮ ಹುದ್ದೆಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ರಿಜಿಸ್ಟರು ಅಥವಾ ದಾಖಲೆಯಲ್ಲಿ ಯಾವುದೇ ಗ್ರಾಮ ಹುದ್ದೆಯನ್ನು ನಮೂದಿಸಲಾಗಿರುವಲ್ಲಿ ಆ ಇಡೀ ಗುಂಪನ್ನು ಧಾರಕನೆಂಬುದಾಗಿ ಭಾವಿಸತಕ್ಕದ್ದು;

(ಜ) "ಕೆಳದರ್ಜೆಯ ಗ್ರಾಮ ಹುದ್ದೆ" ಎಂದರೆ ಪಟೇಲ್ ಅಥವಾ ಗ್ರಾಮ ಲೆಕ್ಕಿಗನಿಗಿಂತ ಕಡಿಮೆ ದರ್ಜೆಯ ಪ್ರತಿಯೊಂದು ಗ್ರಾಮ ಹುದ್ದೆ ;

(ಝ) "ಅಧಿಸೂಚನೆ' ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಞ) " ಬದಲಿ ಕಾರ್ಯನಿರ್ವಾಹಕ' 'ಎಂದರೆ ಅವನು ಅಂಥ ಹುದ್ದೆಯ ಕರ್ತವ್ಯಗಳನ್ನು ನೆರವೇರಿಸಲು ಹಕ್ಕುನನು ಹೊಂದಿರುವ ವ್ಯಕ್ತಿಯಾಗಿರಲಿ ಅಥವಾ ಅಂಥ ಹುದ್ದೆಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ನೇಮಕಗೊಂಡ ಬದಲಿ ಯಾವನೇ ಆಗಿರಲಿ ಗ್ರಾಮ ಹುದ್ದೆಯ ಕರ್ತವ್ಯಗಳನ್ನು ವಾಸ್ತವವಾಗಿ ನೆರವೇರಿಸುವ ವ್ಯಕ್ತಿ;

(ಟ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಠ) "ಗೇಣಿ ಕಾನೂನು" ಎಂದರೆ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961;

(ಡ) " ಅನಧಿಕೃತ ಹಿಡುವಳಿದಾರ" ಎಂದರೆ ಯಾವುದೇ ಹಕ್ಕಿಲ್ಲದೇ ರಾಜ್ಯವು ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಲಾದ ಅಥವಾ ಅಂಥ ಗ್ರಾಮ ಹುದ್ದೆಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಅಕೃತ ಮತ್ತು ಶೂನ್ಯವಾಗಿರುವಂಥ ಅದರ ಯಾವುದೇ ಗೇಣಿ, ಅಡಮಾನ, ಮಾರಾಟ, ದಾನ ಅಥವ ಯಾವುದೇ ಇತರ ಬಗೆಯ ಪರಭಾರೆಯ ಮೇರೆಗೆ ಭೂಮಿಯ ಸ್ವಾಧೀನದಲ್ಲಿರುವ ವ್ಯಕ್ತಿ;

(ಢ) "ಗ್ರಾಮ ಹುದ್ದೆ" ಎಂದರೆ ಯಾವ ಗ್ರಾಮ ಹುದ್ದೆಗೆ ಉಪಲಬ್ಧಿಗಳನ್ನು ಲಗತ್ತು ಮಾಡಲಾಗಿದೆಯೇ ಮತ್ತು ಯಾವುದನ್ನು ಮೂಲತಃ ಸಂಬಂಧಪಟ್ಟ ಸೇವೆಗಳು ಮುಂದುವರಿದಿರಲಿ ಅಥವಾ ಅವುಗಳನ್ನು ನೆರವೇರಿಸುವುದು ಅಥವಾ ಅವುಗಳನ್ನು ತಗಾದೆ ಮಾಡುವುದು ನಿಂತು ಹೋಗಿರಲಿ ಮತ್ತು ಸ್ಥಳೀಯವಾಗಿ ಆ ಹುದ್ದೆಯು ಯಾವುದೇ ಹೆಸರಿನಿಂದ ಕರೆದಿದ್ದಾಗಿರಲಿ, ಆಡಳಿತ ಅತವಾ ಕಂದಾಯದ ಸಂಗ್ರಹಣೆಗೆ ಅಥವಾ ಸುವ್ಯವಸ್ಥೆಯ ಪಾಲನೆ ಅಥವಾ ಗಡಿಗಳು ಅಥವಾ ಗ್ರಾಮದ ಸಿವಿಲ್ ಆಡಳಿತದ ಇತರ ವಿಷಯದ ಇತ್ಯರ್ಥಕ್ಕೆ ಸಂಬಂಧಿಸಿದ ಕರ್ತವ್ಯಗಳ ನೆರವೇರಿಕೆಗಾಗಿ ಗ್ರಾಮ ಹುದ್ದೆಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಅನುವಂಶಿಕವಾಗಿ ಧಾರಣಮಾಡಿದ್ದಂಥ ಪ್ರತಿಯೊಂದು ಗ್ರಾಮ ಹುದ್ದೆ.

(2) ಈ ಅಧಿನಿಯಮದಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಪದಾವಳಿಗಳು, ಸಂಹಿತೆಯಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕುದು.

**3. ಕೆಲವು ಪ್ರಶ್ನೆಗಳನ್ನು ಮತ್ತು ಅಪೀಲುಗಳನ್ನು ತೀರ್ಮಾನಿಸಲು ಡೆಪ್ಯೂಟಿ ಕಮೀಷನರನ ಅಧಿಕಾರಗಳು:**

(1)(ಕ) ರಾಜ್ಯವು ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ಭೂಮಿಯನ್ನು ಮಂಜೂರು ಮಾಡಿತ್ತೇ ಅಥವಾ ಮುಂದಯವರಿಸಿತ್ತೇ ಅಥವಾ ಅದಕ್ಕೆ ಲಗತ್ತಿಸಲಾಗಿತ್ತೇ ಹೇಗೆ, ಅಥವಾ

(ಖ) ಯಾವನೇ ವ್ಯಕ್ತಿಯು ಒಂದು ಗ್ರಾಮ ಹುದ್ದೆಯ ಧಾರಕನೋ ಹೇಗೆ, ಅಥವಾ

(ಗ) ಯಾವನೇ ವ್ಯಕ್ತಿಯು ಅಧಿಕೃತ ಹಿಡುವಳಿದಾರನೋ ಹೇಗೆ, ಅಥವಾ

(ಘ) ಯಾವನೇ ವ್ಯಕ್ತಿಯು ಅನಧಿಕೃತ ಹಿಡುವಳಿದಾರನೊ ಹೇಗೆ

– ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಡೆಪ್ಯೂಟಿ ಕಮೀಷನರನು, ಬಾಧಿತನಾದ ಪಕ್ಷಕಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕುದು.

(2) ಅಂಥ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ತೀರ್ಮಾನದ ತೊಂಭತ್ತು ದಿವಸಗಳೊಳಗಾಗಿ ಆ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶನಿಗೆ ಅಪೀಲವನ್ನು ದಾಖಲು ಮಾಡಬಹುದು ಮತ್ತು ಅಂಥ ಅಪೀಲಿನ ಬಗ್ಗೆ ಜಿಲ್ಲಾ ನ್ಯಾಯಾಧೀಶನ ತೀರ್ಮಾನವು ಅಂತಿಮವಾಗಿರತಕ್ಕುದು.

ಕಾಲ ಪರಿಮಿತಿ ಅಧಿನಿಯಮ, 1963ರ (ಕೇಂದ್ರ ಅಧಿನಿಯಮ 1963ರ 36)ದ 4,5,12 ಮತ್ತು 14ನೇ ಪ್ರಕರಣಗಳ ಉಪಬಂಧಗಳು ಅಂಥ ಅಪೀಲಿಗೆ ಅನ್ವಯವಾಗತಕ್ಕುದು.

**4. ಗ್ರಾಮ ಹುದ್ದೆಗಳಿಗೆ ಅನುಗತವಾಗಿ ಬರುವ ಹಕ್ಕುಗಳೊಂದಿಗೆ ಅವುಗಳ ರದ್ದಿಯಾತಿ:** ಯಾವುದೇ ಆಚರಣೆ, ರೂಢಿ, ವ್ಯವಸ್ಥೆ, ಮಂಜೂರಾತಿ, ಒಪ್ಪಂದ, ಸನದು ಅಥವಾ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶ ಅಥವಾ ಗ್ರಾಮ ಹುದ್ದೆಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಏನೇ ಇದ್ದಾಗ್ಯೂ, ಗೊತ್ತುಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಪರಿಣಾಮಕಾರಿಯಾಗುವಂತೆ;

(1) ಎಲ್ಲಾ ಗ್ರಾಮ ಹುದ್ದೆಗಳನ್ನು ರದ್ದುಪಡಿಸತಕ್ಕದ್ದು ಮತ್ತು ಅವುಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.

(2) ಸದರಿ ಗ್ರಾಮ ಹುದ್ದೆಗಳಿಗೆ ಸಂಬಂಧಪಟ್ಟ ಅನುಗತವಾಗಿ ಬಂದಿರುವ ಹಕ್ಕುಗಳು ಪದ ಧಾರಣ ಮಾಡುವ ಮತುತ ಅದಕ್ಕೆ ಲಗತ್ತಾದ ಉಪಲಬ್ದಿಗಳು, ಹಣದ ರೂಪದಲ್ಲೇ ಆಗಲಿ ಅಥವಾ ವಸ್ತು ರೂಪದಲ್ಲೇ ಆಗಲಿ ರೂಢಿಗತವಾದ ಶುಲ್ಕಗಳು ಅಥವಾ ಪರಿಲಬ್ಧಿಗಳನ್ನು ವಿಧಿಸುವ ಹಕ್ಕು ಮತ್ತು ಸೇವೆಯನ್ನು ಸಲ್ಲಿಸುವ ಹೊಣೆಗಾರಿಕೆಯನ್ನು ಒಳಗೊಂಡು ಅಂತ್ಯಗೊಳ್ಳತಕ್ಕುದು ಮತ್ತು ಅವುಗಳನ್ನು ಈ ಮೂಲಕ ಅಂತ್ಯಗೊಳಿಸಲಾಗಿದೆ.

(3) 5ನೇ ಪ್ರಕರಣ, 6ನೇ ಪ್ರಕರಣ ಮತ್ತು 7ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ರಾಜ್ಯವು, ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಲಾದ ಎಲ್ಲಾ ಭೂಮಿಗಳನ್ನು ಪುನಃ ವಶಪಡಿಸಿಕೊಳ್ಳತಕ್ಕದ್ದು ಮತ್ತು ಅವುಗಳನ್ನು ಈ ಮೂಲಕ ಪುನಃ ವಶಪಡಿಸಿಕೊಳ್ಳಲಾಗಿದೆ ಮತ್ತು ಅವು ಪರಭಾರೆ ಮಾಡಿಲ್ಲದ ಭೂಮಿ ಅಥವಾ ರೈತವಾರಿ ಭೂಮಿಯಾಗಿದ್ದಿದ್ದರೆ ಹೇಗೊ ಹಾಗೆ ಸಂಹಿತೆ ಮತ್ತು ಅದರ ಮೇರೆಗೆ ಮಾಡಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳ ಮೇರೆಗೆ ಭೂ ಕಂದಾಯ ಸಂದಾಯ ಮಾಡಲು ಒಳಪಟ್ಟಿರತಕ್ಕದ್ದು.

**5. 4ನೇ ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಭೂಮಿಯನ್ನು ಗ್ರಾಮ ಹುದ್ದೆಯ ಧಾರಕನಿಗೆ ಪುನಃ ಮಂಜೂರು ಮಾಡುವುದು:** (1) 4ನೇ ಪ್ರಕರಣದ (3)ನೇ ಖಂಡದ ಮೇರೆಗೆ ವಶಪಡಿಸಿಕೊಂಡ ಭೂಮಿಯನ್ನು, 6ನೇ ಪ್ರಕರಣ ಮತ್ತು 7ನೇ ಪ್ರಕರಣದ ಒಳಗೆ ಬರದ ಸಂದರ್ಭಗಳಲ್ಲಿ ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಗ್ರಾಮ ಹುದ್ದೆಯನ್ನು ಧಾರಣ ಮಾಡಿದ್ದಂಥ ವ್ಯಕ್ತಿಗೆ (ಇಲ್ಲಿ ಇನ್ನು ಮುಂದೆ ಧಾರಕನೆಂದು ಉಲ್ಲೇಖಿಸಿದ) ಅಂಥ ಧಾರಕನು ಅಥವಾ ಅವನ ಪರವಾಗಿ ರಾಜ್ಯ ಸರ್ಕಾರಕ್ಕೆ ನಿಯಮಿಸಿದ ಅವಧಿಯೊಳಗೆ ಮತ್ತು ನಿಯಮಿಸಿದ ರೀತಿಯಲ್ಲಿ ಕೆಳದರ್ಜೆಯ ಗ್ರಾಮ ಹುದ್ದೆಯಧಾರಕನ ಸಂದರ್ಭದಲ್ಲಿ, ಅಂಥ ಭೂಮಿಯ ಬಗ್ಗೆ ಪೂರ್ತಿ ಸಮದಾಯದ ಮೊಬಲಗಿನ ಮೂರರಷ್ಟಕ್ಕೆ ಸಮನಾದ ಮತ್ತು ಇತರೆ ಗ್ರಾಮ ಹುದ್ದೆಗಳ ಧಾರಕರ ಸಂದರ್ಭದಲ್ಲಿ ಅದರ ಆರರಷ್ಟಕ್ಕೆ ಸಮನಾದ ಅಧಿಬೋಗದ ಬೆಲೆಯನ್ನು ಸಂದಾಯ ಮಾಡಿದ ಮೇಲೆ ಮಂಜೂರು ಮಾಡತಕ್ಕದ್ದು ಮತ್ತು ಆ ಧಾರಕನನ್ನು ಅಂಥ ಭೂಮಿಗೆ ಸಂಬಂಧಿಸಿದಂತೆ ಸಂಹಿತೆಯ ಅರ್ಥ ವ್ಯಾಪ್ತಿಯೊಳಗೆ ಅಧಿಭೋಗದಾರ ಅಥವಾ ರೈತವಾರಿ ಪಟ್ಟಿ ಧಾರಕನೆಂಬುದಾಗಿ ಭಾವಿಸತಕ್ಕದ್ದು ಮತ್ತು ಅವನು ಆ ಸಂಹಿತೆಯ ಉಪಬಂಧಗಳು ಮತ್ತು ಅದರ ಮೇರೆಗೆ ಮಾಡಿದ ನಿಯಮಗಳು ಮತ್ತು ಆದೇಶಗಳಿಗನುಸಾರವಾಗಿ ಗೊತ್ತುಪಡಿಸಿದ ದಿನಾಂಕದಿಂದ ರಾಜ್ಯ ಸರ್ಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡಲು ಮೂಲತಃ ಹೊಣೆಗಾರನಾಗಿತಕ್ಕುದು ಮತ್ತು ಪರಭಾರೆ ಮಾಡಿಲ್ಲದ ಭೂಮಿಗೆ ಅಥವಾ ರೈತವಾರಿ ಭೂಮಿಗೆ ಸಂಬಂಧಪಟ್ಟಂತೆ ಆ ಸಂಹಿತೆ ಮತ್ತು ನಿಯಮಗಳು ಮತ್ತು ಆದೇಶಗಲ ಎಲ್ಲಾ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸದರಿ ಭೂಮಿಗೆ ಅನ್ವಯವಾಗತಕ್ಕದು:

ಪರಂತು, ಗ್ರಾಮ ಹುದ್ದೆಯ ಪರಿಶ್ರಮ ಧನವೆಂದು ಆ ಗ್ರಾಮ ಹುದ್ದೆಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ವಹಿಸಿಕೊಟ್ಟಿಲ್ಲದೆ ಇದ್ದಂಥ ಭೂಮಿಗೆ ಸಂಬಂಧಿಸಿದಂತೆ ಕೆಳದರ್ಜೆಯ ಗ್ರಾಮ ಹುದ್ದೆಗಳ ಧಾರಕರ ಸಂದರ್ಭದಲ್ಲಿ ಅಂಥ ಭೂಮಿಯ ಪೂರ್ತಿ ಕಂದಾಯದ ಮೊಬಲಗಿಗೆ ಮತ್ತು ಇತರ

ಗ್ರಾಮ ಹುದ್ದೆಗಳ ಧಾರಕರ ಸಂದರ್ಭದಲ್ಲಿ ಅಂಥ ಮೊಬಲಿನ ಮೂರರಷ್ಟಕ್ಕೆ ಸಮನಾದ ಅಧಿಭೋಗ ಬೆಲೆಯನ್ನು ಅದರ ಮರು ಮಂಜೂರಾತಿಗಾಗಿ ಧಾರಕನು ಅಥವಾ ಅವನ ಪರವಾಗಿ ಸಂದಾಯ ಮಾಡತಕ್ಕದ್ದು.

(2) ನಿಯಮಿಸಿದ ಅವಧಿಯೊಳಗೆ ಮತ್ತು ನಿಯಮಿಸಿದ ರೀತಿಯಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ಅಧಿಭೋಗದ ಬೆಲೆಯನ್ನು ಸಂದಾಯ ಮಾಡಲು ತಪ್ಪಿದ್ದರೆ, ಧಾರಕನು ಆ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುತ್ತಿರುವುದಾಗಿ ಭಾವಿಸತಕ್ಕುದು ಮತ್ತು ಅವನು ಸಂಹಿತೆಯ ಉಪ-ಬಂಧಗಳಿಗನುಸಾರವಾಗಿ ಡೆಪ್ಯೂಟಿ ಕಮೀಷನರನು ಅವನನ್ನು ಅದರಿಂದ ಕ್ಷಿಪ್ರವಾಗಿ ಹೊರ ಹಾಕಲು ಗುರಿಯಾಗತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಪುನಃ, ಮಂಜೂರು ಮಾಡಿದ ಸಂದರ್ಭಾನುಸಾರವಾಗಿ, ಅಧಿಭೋಗದಾರಿಕೆ ಅತವಾ ರೈತವಾರಿ ಪಟ್ಟಿಯು ಹಿಂದೂ ಒಟ್ಟು ಕುಟುಂಬದ ಸದಸ್ಯರ ಒಳಗೆ ವಿಭಜನೆಯ ಮೂಲಕವಲ್ಲದೆ ಅನ್ಯಥಾ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1978ರ 1ನೇ ಪ್ರಕರಣವು ಪ್ರಾರಂಭವಾದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯವರೆಗೆ ವರ್ಗಾವಣೆಯವಾಗತಕ್ಕುದಲ್ಲ;

ಪರಂತು, ಮುಕ್ತಗೊಳಿಸಿದ ಇನಾಮಿನಲ್ಲಿನ ಗ್ರಾಮ ಹುದ್ದೆಯ ಧಾರಕನಿಗೆ ಮಂಜೂರು ಮಾಡಿದ ಭೂಮಿಗೆ ಸಂಬಂಧಿಸಿದಂತೆ ಅಂಥ ಅಧಿಭೋಗ ಅಥವಾ ರೈತವಾರಿ ಪಟ್ಟಿಯು ಡೆಪ್ಯೂಟಿ ಕಮಿಷನರನ ಪೂರ್ವ ಮಂಜುರಾತಿಯೊಂದಿಗೆ ವರ್ಗಾವಣೀಯವಾಗತಕ್ಕುದು. ಅದನ್ನು ಆ ಭೂಮಿಯ ಪೂರ್ತಿ ಕಂದಾಯದ ಮೊಬಲಿಗಿಗೆ ಹದಿನೈದರಷ್ಟಕ್ಕೆ ಸಮನಾದ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಮಂಜೂರು ಮಾಡತಕ್ಕುದು.

(4) (3)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಮಾಡಿದ ಭೂಮಿಯ ಯಾವುದೇ ವರ್ಗಾವಣೆಯು, ಅಕೃತ ಮತ್ತು ಶೂನ್ಯವಾಗಿರತಕ್ಕುದು ಮತ್ತು ಹಾಗೆ ವರ್ಗಾವಣೆ ಮಾಡಿದ ಭೂವಿಯನ್ನು ದಂಡವಾಗಿ, ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕುದು ಮತ್ತು ಅದು ಅದರಲ್ಲಿ ನಿಹಿತವಾಗತಕ್ಕುದು ಮತ್ತು ಅದರ ಸ್ವಾಧೀನದಲ್ಲಿರುವ ಯಾವನೇ ವ್ಯಕ್ತಿಯನ್ನು ಡೆಪ್ಯೂಟಿ ಕಮಿಷನರನು ಅದರಿಂದ ಕ್ಷಿಪ್ರವಾಗಿ ಹೊರಹಾಕತಕ್ಕುದು ಮತ್ತು ಆ ಭೂಮಿಯನ್ನು ಅಧಿಭೋಗದಲ್ಲಿಲ್ಲದ, ಪರಭಾರೆ ಮಾಡಿಲ್ಲದ ಭೂಮಿಗಳ ವಿಲ್‌ಗೆ ಅನ್ವಯವಾಗಬಹುದಾದ ಕಾನೂನಿಗನುಸಾರವಾಗಿ ವಿಲೆ ಮಾಡತಕ್ಕುದು;

ಪರಂತು, (3)ನೇ ಉಪಪ್ರಕರಣವನ್ನು ಉಲ್ಲಂಘಿಸಿ ಆ ಭೂಮಿಯನ್ನು ವರ್ಗಾವಣೆ ಮಾಡಿರುವ ವ್ಯಕ್ತಿಯು ಜೀವಂತವಾಗಿಲ್ಲದಿದ್ದರೆ ಅಂಥ ಭೂಮಿಯನ್ನು ವಿಲೆ ಮಾಡುವಲ್ಲಿ ಅಂಥ ವ್ಯಕ್ತಿಯ ವಾರಸುದಾರರಿಗೆ ಆದ್ಯತೆಯನ್ನು ಕೊಡತಕ್ಕುದು.

**ವಿವರಣೆ:** ಸಂದೇಹಗಳ ನಿವಾರಣೆಗಾಗಿ (3)ನೇ ಉಪ– ಪರಕರಣದಲ್ಲಿ ಮತ್ತು ಈ ಉಪ –ಪ್ರರಕಣದಲ್ಲಿ ವರ್ಗಾವಣೆಯು ಗೇಣಿಯನ್ನು ಸೃಷ್ಟಿಸುವುದನ್ನು ಒಳಗೊಳ್ಳುತ್ತದೆ ಎಂಬುದಾಗಿ ಈ ಮೂಲಕ ಘೋಷಿಸಲಾಗಿದೆ.

(5) (3)ನೇ ಉಪ-ಪ್ರಕರಣದಲ್ಲಿರುವುದು ಯಾವುದೂ ಅಂಥ ಭೂಮಿಯ ಅಭಿವೃದ್ಧಿಗಳಿಗಾಗಿ ಅಥವಾ ಅಂಥ ಭೂಮಿಯ ಸಾಗುವಳಿಗಾಗಿ ಜಾನುವಾರುಗಳನ್ನು ಅಥವಾ ಕೃಷಿ ಉಪಕರಣಗಳನ್ನು ಖರೀದಿಸುವುದಕ್ಕಾಗಿನ ಸಾಲಗಳಿಗಾಗಿನ ಭದ್ರತೆ ಎಂದು ರಾಜ್ಯ ಸರ್ಕಾರ, ಸಹಕಾರಿ ಸಂಘದ ಮತ್ತು ಬ್ಯಾಂಕಿನ ಹೆಸರಿಗೆ ಮಾಡಲಾದ ವರ್ಗಾವಣೆಗೆ ಅನ್ವಯವಾಗತಕ್ಕುದಲ್ಲ.

**ವಿವರಣೆ:** –''ಬ್ಯಾಂಕು' 'ಎಂದರೆ,–

**(i)** ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (ಕೇಂದ್ರ ಅಧಿನಿಯಮ 1949ರ 10) ಇದರಲ್ಲಿ ಪರಿಭಾಷಿಸಿದಂತೆ ಒಂದು ಬ್ಯಾಂಕಿಂಗ್ ಕಂಪನಿ;

**(ii)** ಭಾರತದ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (ಕೇಂದ್ರ ಅಧಿನಿಯಮ, 1955ರ 23) ದ ಮೇರೆಗೆ ರಚಿಸಲಾದ ಭಾರತದ ಸ್ಟೇಟ್ ಬ್ಯಾಂಕ್;

**(iii)** ಭಾರತದ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕ್‌ಗಳು) ಅಧಿನಿಯಮ, 1959 (ಕೇಂದ್ರ ಅಧಿನಿಯಮ, 1959ರ 38) ಇದರಲ್ಲಿ ಪರಿಭಾಷಿಸಿದಂತೆ ಸಹಾಯಕ ಬ್ಯಾಂಕ್;

**(iv)** ಬ್ಯಾಂಕಿಂಗ್ ಕಂಪನಿಗಳು (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (ಕೇಂದ್ರ ಅಧಿನಿಯಮ, 1970ರ 5) ದ ಮೇರೆಗೆ ರಚಿಸಲಾದ ಹೊಸ ಸಂವಾದಿ ಬ್ಯಾಂಕು;

**(v)** ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಅಧಿನಿಯಮ, 1976 (ಕೇಂದ್ರ ಅಧಿನಿಯಮನ, 1976ರ 21)ದ ಮೇರೆಗೆ ರಚಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕು;

**(vi)** ಕೃಷಿ ಪುನರ್ ವಿತ್ತೀಯ ಮತ್ತು ಅಭಿವೃದ್ಧಿ ನಿಗಮ ಅಧಿನಿಯಮ, 1963 (ಕೇಂದ್ರಾಧಿನಿಯಮ, 1963ರ 10) ದ ಮೇರೆಗೆ ರಚಿಸಲಾದ ಕೃಷಿ ಪುನರ್ವಿತ್ತೀಯ ಮತ್ತು ಅಭಿವೃದ್ಧಿ ನಿಗಮ;

**(vii)** ಕಂಪನಿಗಳ ಅಧಿನಿಯಮ, 1956 (ಕೇಂದ್ರ ಅಧಿನಿಯಮ, 1956ರ 1) ದ ಮೇರೆಗೆ ನಿಗಮಿತಗೊಂಡ ಕಂಪನಿಯಾದ ಕೃಷಿ ವಿತ್ತೀಯ ನಿಗಮ ಪರಿಮಿತ.

(6) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, (1)ನೇ ಉಪ–ಪ್ರಕರಣದ ಮೇರೆಗೆ ಪುನರ್ ಮಂಜೂರಾತಿಗೆ ಮುಂಚೆ ಮಾಡಿಕೊಂಡ 4ನೇ ಪ್ರಕರಣದ (3)ನೇ ಖಂಡದ ಮೇರೆಗೆ ಪುನಃ ಪಡೆದ ಭೂಮಿಯ ವರ್ಗಾವಣೆಗಾಗಿನ ಯಾವುದೇ ಒಪ್ಪಂದವು ಅಕೃತ ಮತ್ತು ಶೂನ್ಯವಾಗತಕ್ಕುದು ಮತ್ತು ಅಂಥ ಒಪ್ಪಂಥದ ಮುಂದುವರಿಕೆಯಲ್ಲಿ ಅದರ ಸ್ವಾಧೀನದಲ್ಲಿರುವ ಯಾವನೇ ವ್ಯಕ್ತಿಯನ್ನು ಡೆಪ್ಯೂಟಿ ಕಮೀಷನರನು ಅದರಿಂದ ಕ್ಷಿಪ್ರವಾಗಿ ಹೊರಹಾಕತಕ್ಕುದು.

**6. 4ನೇ ಪ್ರಕರಣದ ಮೇರೆಗೆ ಪುನಃ ವಶಪಡಿಸಿಕೊಂಡ ಭೂಮಿಯನ್ನು ಅಧಿಕೃತಗೊಳಿಸಿದ ಹಿಡುವಳಿದಾರರಿಗೆ ಮರು ಮಂಜೂರಾತಿ:** – 4ನೇ ಪ್ರರಕಣದ (3)ನೇ ಖಂಡದ ಮೇರೆಗೆ ಪುನಃ ವಶಪಡಿಸಿಕೊಳ್ಳಲಾದ ಯಾವುದೇ ಭೂಮಿಯನ್ನು ಅಧಿಕೃತಗೊಳಿಸಿದ ಹಿಡುವಳಿದಾರನು ಧಾರಣ ಮಾಡಿರುವಲ್ಲಿ ಅದನ್ನು ಅವನು ಆ ಭೂಮಿಯ ಪೂರ್ಣ ಕಂದಾಯದ ಆರರಷ್ಟಕ್ಕೆ ಸಮನಾದ ಅಧಿಭೋಗ ಬೆಲೆಯನ್ನು ರಾಜ್ಯ ಸರ್ಕಾರಕ್ಕೆ ಅವನು ಸಂದಾಯಮಾಡಿದ ಮೇಲೆ ಮತ್ತು 5ನೇ ಪ್ರಕರಣದಲ್ಲಿ ಹೇಳಿದ ಷರತ್ತುಗಳು ಮತ್ತು ಪರಿಣಾಮಗಳಿಗೆ ಒಳಪಟ್ಟು ಅಧಿಕೃತಗೊಳಿಸಿದ ಹಿಡುವಳಿದಾರನಿಗೆ ಮರು ಮಂಜೂರಾತಿ ಮಾಡತಕ್ಕುದು; ಮತ್ತು 5ನೇ ಪ್ರಕರಣದ ಎಲ್ಲಾ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಪ್ರಕರಣದ ಮೇರೆಗೆ ಭೂಮಿಯ ಮರು ಮಂಜೂರಾತಿಗೆ ಸಂಬಂಧಪಟ್ಟಂತೆ ಆ ಗ್ರಾಮ ಹುದ್ದೆಯ ಧಾರಕನು ಅವನು ಆಗಿದ್ದಿದ್ದರೆ ಹೇಗೊ ಹಾಗೆ ಅಧಿಕೃತಗೊಳಿಸಿದ ಹಿಡುವಳಿದಾರರಿಗೆ ಅನ್ವಯವಾಗತಕ್ಕುದು.

**7. ಅನಧಿಕೃತ ಹಿಡುವಳಿದಾರರನ್ನು ಹೊರಹಾಕುವುದು ಇತ್ಯಾದಿ:–** (1) 4ನೇ ಪ್ರಕರಣದ (3)ನೇ ಖಂಡದ ಮೇರೆಗೆ ಪುನಃ ವಶಪಡಿಸಿಕೊಂಡ ಯಾವುದೇ ಭೂಮಿ ಅನಧಿಕೃತ ಹಿಡುವಳಿದಾರನ ಸ್ವಾಧೀನದಲ್ಲಿರುವಲ್ಲಿ ಅಂಥ ಅನಧಿಕೃತ ಹಿಡುವಳಿದಾರನನ್ನು ಅದರಿಂದ ಕ್ಷಿಪ್ರವಾಗಿ ಹೊರಹಾಕತಕ್ಕುದು ಮತ್ತು ಆ ಭೂಮಿಯನ್ನು ಡೆಪ್ಯೂಟಿ ಕಮೀಷರನು ಕಾನೂನಿಗೆ ಅನುಸಾರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕುದು;

ಪರಂತು, ಯಾವುದೇ ಅಂಥ ಕ್ಷಿಪ್ರ ಹೊರಹಾಕುವಿಕೆಯನ್ನು, ಬಾಧಿತನಾದ ವ್ಯಕ್ತಿಗೆ ಮನವಿಯನ್ನು ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೆ ಹೊರಹಾಕುವಿಕೆಯ ಆದೇಶವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದ್ದಲ್ಲ ಮತ್ತು (1)ನೇ ಉಪ–ಪ್ರಕರಣದ ಮೂಲಕ ಪ್ರದಾನಮಾಡಿದ ಅಧಿಕಾರಿಗಳ ಅನುಸರಣಿಯಲ್ಲಿ ಡೆಪ್ಯೂಟಿ ಕಮೀಷನರನು ಕೈಗೊಂಡ ಅಥವಾ ಇಷ್ಟರಲ್ಲಿ ಕೈಗೊಳ್ಳಲಿರುವ ಯಾವುದೆ ವ್ಯವಹರಣೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯವು ಯಾವುದೆ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕುದಲ್ಲ.

(3) (1)ನೇ ಉಪ–ಪ್ರರಕಣದ ಮೇರೆಗೆ ಯಾವ ಭೂಮಿಯಿಂದ ಅನಧಿಕೃತ ಹಿಡುವಳಿದಾರನನ್ನು ಹೊರಹಾಕಲಾಗಿದೆಯೋ ಆ ಭೂಮಿಯನ್ನು–

(ಕ) ಅದು, ಕೆಳದರ್ಜೆಯ ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ್ದರೆ ಅಥವಾ ಮುಂದುವರಿಸಿದ್ದರೆ ಅಥವಾ ಅದಕ್ಕೆ ಲಗತ್ತಿಸಿದ್ದರೆ, ಅಂಥ ಗ್ರಾಮ ಹುದ್ದೆಯ ಧಾರಕನಿಗೆ ಮರು ಮಂಜುರಾತಿ ಮಾಡತಕ್ಕುದು. ಮತ್ತು

(ಖ) ಇತರ ಸಂದರ್ಭಗಳಲ್ಲಿ ಅದನ್ನು ಅಧಿಭೋಗದಲ್ಲಿಲ್ಲದ, ಪರಭಾರೆ ಮಾಡಿಲ್ಲದ ಭೂಮಿಗಳ ವಿಲೆಗೆ ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ವಿಲೆ ಮಾಡತಕ್ಕದು.

**7ಕ. ವರ್ಗಾವಣೆ ಇತ್ಯಾದಿಗಳ ಮೇಲೆ ಪರಿಬಂಧ:–** (1) ಈ ಪ್ರಕರಣದ ಪ್ರಾರಂಭದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯವರೆಗೆ ಯವಾವನೇ ವ್ಯಕ್ತಿಯು 5ನೇ ಪ್ರಕರಣದ (4)ನೇ ಉಪ–ಪ್ರಕರಣ 7ನೇ ಪ್ರಕರಣ ಅಥವಾ (3)ನೇ ಉಪ–ಪ್ರಕರಣದ ಮೇರೆಗೆ ವಿಲೆಮಾಡಿದ ಅಥವಾ ಮರು ಮಂಜೂರು ಮಾಡಿದ ಯಾವುದೇ ಭೂಮಿಯನ್ನು ವರ್ಗಾವಣೆ ಮಾಡತಕ್ಕುದಲ್ಲ ಅಥವಾ ವರ್ಗಾವಣೆಯ ಮೂಲಕ ಅರ್ಜಿಸಲ್ಲಿಸತಕ್ಕದ್ದಲ್ಲ ಮತ್ತು ಅದನ್ನು ಉಲ್ಲಂಘನೆಮಾಡಿದ ಅಂಥ ಭೂಮಿಯ ಯಾವುದೇ ವರ್ಗಾವಣೆಯ ಅಕೃತ ಮತ್ತು ಶೂನ್ಯವಾಗಿರತಕ್ಕದ್ದು. ಹಾಗೆ ವರ್ಗಾವಣೆ ಮಾಡಲಾದ ಭೂಮಿಯು ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯಸರ್ಕಾರದಲ್ಲಿ ನಿಹಿತವಾಗತಕ್ಕುದು. 5ನೇ ಪ್ರಕರಣದ (5)ನೇ ಉಪ–ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂಥ ಭೂಮಿಯ ವರ್ಗಾವಣೆಗೆ ಅನ್ವಯವಾಗತಕ್ಕುದು.

(2) (1)ನೇ ಉಪ–ಪ್ರಕರಣವನ್ನು ಉಲ್ಲಂಘನಿಸಿ ಅಂಥ ಭೂಮಿಯನ್ನು ವರ್ಗಾವಣೆಯ ಮೂಲಕ ಅರ್ಜಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಸದಿಂದ ದಂಡಿತನಾಗತಕ್ಕುದು.

**8. ಗೇಣಿ ಕಾನೂನಿನ ಅನ್ವಯ:–** ರಾಜ್ಯವು, ಗ್ರಾಮಹುದ್ದೆಗೆ ಸಂಬಂಧಪಟ್ಟಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಿದ ಯಾವುದೇ ಭೂಮಿಯನ್ನು ಕಾನೂನು ಸಮ್ಮತವಾಗಿ ಗೇಣಿಗೆ ಕೊಟ್ಟಿದ್ದರೆ ಮತ್ತು ಗೊತ್ತುಪಡಿಸಿದ ದಿನಾಂಕದಂದು ಅಂಥ ಗೇಣಿಯು ಅಸ್ತಿತ್ವದಲ್ಲಿದ್ದರೆ, ಆ ಭೂಮಿಯು ಇರುವಂಥ ಪ್ರದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಗೇಣಿ ಕಾನೂನಿನ ಉಪಬಂಧಗಳು ಸದರಿ ಗೇಣಿಗೆ ಅನ್ವಯವಾಗತಕ್ಕುದು ಮತ್ತು 5, 6 ಅಥವಾ 7ನೇ ಪ್ರಕರಣಗಳ ಮೇರೆಗೆ ಯಾರಿಗೆ ಅಂಥ ಭೂವಿಯನ್ನು ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿಯ ಮತ್ತು ಅವನ ಗೇಣಿದಾರ ಅಥವಾ ಗೇಣಿದಾರರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸದರಿ ಗೇಣಿ ಕಾನೂನಿನ ಉಪಬಂಧಗಳ ಮೂಲಕ ನಿಯಂತ್ರಿತವಾಗತಕ್ಕುದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ "ಭೂಮಿ" ಎಂಬ ಪದವು, ಮೇಲೆ ಉಲ್ಲೇಖಿಸಿದ ಗೇಣಿ ಕಾನೂನಿನಲ್ಲಿ ಅದಕ್ಕೆ ಕೊಟ್ಟಿರುವಂಥದೇ ಅರ್ಥವನ್ನು ಹೊಂದಿರತಕ್ಕುದು.

**9. ಗ್ರಾಮ ಹುದ್ದೆಯ ಧಾರಕನಿಗೆ ಪರಿಹಾರ:–** (1) ಈ ಅಧಿನಿಯಮದ ಮೇರೆಗೆ ರದ್ದುಗೊಳಿಸಿದ ಗ್ರಾಮ ಹುದ್ದೆಯ ಧಾರಕನಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಂತುಗಳಲ್ಲಿ–

**(i)** ಕೆಳದರ್ಜೆಯ ಗ್ರಾಮ ಹುದ್ದೆಯ ಧಾರಕನ ಸಂದರ್ಭದಲ್ಲಿ ಈ ಕೆಳಕಂಡ (ಕ) (ಖ) ಮತ್ತು (ಗ) ಖಂಡಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ ಲೆಕ್ಕ ಹಾಕಿದ ಮೊಬಲಗುಗಳ ಒಟ್ಟು ಮೊತ್ತಕ್ಕೆ ಸಮನಾದ ಮೊಬಲಗನ್ನು;

**(ii)** ಯಾವುದೇ ಇತರ ಗ್ರಾಮ ಹುದ್ದೆಯ ಧಾರಕನ ಸಂದರ್ಭದಲ್ಲಿ ಈ ಕೆಳಕಂಡ (ಕ) ಮತ್ತು (ಖ) ಖಂಡಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ ಲೆಕ್ಕಹಾಕಿದ ಮೊಬಲಗುಗಳ ಒಟ್ಟು ಮೊತ್ತಕ್ಕೆ ಸಮನಾದ ಮೊಬಲಗನ್ನು;

–ಸಂದಾಯ ಮಾಡತಕ್ಕುದು.

(ಕ) ರಾಜ್ಯವು ಯಾವುದೇ ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಿದ ಭೂಮಿಯ ಪೂರ್ತಿ ಭೂಕಂದಾಯದ ಪೂರ್ಣ ಅಥವಾ ಅದರ ಭಾಗವನ್ನು ಅಂಥ ಹುದ್ದೆಯ ಧಾರಕನ ಉಪ ಲಬ್ಧಿಗಳಿಗಾಗಿ ವಹಿಸಿಕೊಟ್ಟಿದ್ದಲ್ಲಿ, ಅಂಥ ಕಂದಾಯ ಅಥವಾ ಅದರ ಭಾಗದ ಮೊಬಲಗು ಮತ್ತು ಧಾರಕನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಜೋಡಿ ಕಂದಾಯ ಅತವಾ ಜೋಡಿ ಯಾವುದಾದರೂ ಇದ್ದರೆ, ಅದರ ಮೊಬಲಗು ಇವೆರಡರ ನಡುವಣ ವ್ಯತ್ಯಾಸಕ್ಕೆ ಸಮನಾದ ಮೊಬಲಗಿನ ಆರರಷ್ಟು;

(ಖ) ರಾಜ್ಯ ಸರ್ಕಾರವು ಗ್ರಾಮ ಹುದ್ದೆಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಧಾರಕನಿಗೆ ಕೊಟ್ಟ ವಾರ್ಷಿಕ ನಗದುಭತ್ಯ ಅಥವಾ ಇತರ ವಾರ್ಷಿಕ ಹಣದ ಸಂದಾಯಕ್ಕೆ ಮುಂಬಯಿ ಅನುವಂಶಿಕ ಹುದ್ದೆಗಳ ಅಧಿನಿಯಮ, 1874 (ಮುಂಬಯಿ ಅಧಿನಿಯಮ, 1874ರ **III**) ದ 12ನೇ ಪ್ರಕರಣದ (ಖ) ಖಂಡದ ಮೇರೆಗೆ ಅಥವಾ ಗ್ರಾಮ ಹುದ್ದೆಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಅಂಥದೇ ಉಪಬಂಧದ ಮೇರೆಗೆ ಪುನಃ ವಶಪಡಿಸಿಕೊಂಡ ಭೂಮಿಯ ಗೇಣಿ ಯಾಗಿರದ ಸಮನಾದ ಮೊಬಲಗಿನ ಆರರಷ್ಟು;

ಪರಂತು, ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಿದ ಭೂಮಿಯು ವಿಸ್ತೀರ್ಣದಲ್ಲಿ ಮೂರು ಎಕರೆಗಳಿಗಿಂತ ಕಡಿಮೆ ಇಲ್ಲದಿರುವಲ್ಲಿ, ಸಂದಾಯ ಮಾಡಬೇಕಾದ ಮೊತ್ತವು ಈ ಖಂಡದಲ್ಲಿ ನಿರ್ದಿಷ್ಟ ಪಡಿಸಿದ ಮೊಬಲಗಿನ ಮೂರರಷ್ಟು ಆಗಿರತಕ್ಕುದು;

ಮತ್ತೂ ಪರಂತು, ಈ ಖಂಡದ ಮೇರೆಗೆ ರಾಜ್ಯ ಸರ್ಕಾರವು ಕೊಟ್ಟ ವಾರ್ಷಿಕ ನಗದುಭತ್ಯ ಅಥವಾ ಇತರ ವಾರ್ಷಿಕ ಸಂದಾಯವನ್ನು ನೀರ್ಧರಿಸುವಲ್ಲಿ:–

**(i)** ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ, ಮೈಸೂರು ಪ್ರದೇಶದಲ್ಲಿ ಸರ್ಕಾರಿ ಆದೇಶ ಸಂಖ್ಯೆ ಆರ್ 23–77; ಎಲ್‌ಆರ್, 69–42–17 ದಿನಾಂಕ:18ನೇ ಅಕ್ಟೋಬರ್ 1942, ಸರ್ಕಾರಿ ಆದೇಶ ಸಂಖ್ಯೆ ಆರ್. 3919–4007; ಎಲ್.ಆರ್. 155–47 ದಿನಾಂಕ:24ನೇ ಸೆಪ್ಟೆಂಬರ್ 1947 ಮತ್ತು ಸರ್ಕಾರಿ ಆದೇಶ ಸಂಖ್ಯೆ ಆ:ರ್.ಡಿ.ಎಫ್. 111 ವಿ.ಓ.ಎ. 57 ದಿನಾಂಕ:8ನೇ ಜೂನ್ 1957 ಇವುಗಳ ಮೂಲಕ;

**(ii)** ಬೆಳಗಾವಿ ಪ್ರದೇಶದಲ್ಲಿ ಸರ್ಕಾರಿ ಆದೇಶ ಸಂಖ್ಯೆ ಜಿ.ಆರ್.ಆರ್.ಡಿ ಸಂಖ್ಯೆ 9790/33 ದಿನಾಂಕ:24ನೇ ಮೇ 1944 ಜಿ.ಆರ್.ಆರ್.ಡಿ. ಸಂಖ್ಯೆ 5741/45, ದಿನಾಂಕ:3ನೇ ಜುಲೈ 1948 ಮತ್ತು ಆದೇಶ ಆರ್. ಡಿ. ಸಂಖ್ಯೆ ಆರ್. ಡಿ. ಎಫ್ 111 ವಿಓಎ 57 ದಿನಾಂಕ 8ನೇ ಜೂನ್ 1957 ಇವುಗಳ ಮೂಲಕ;

(**iii**) ಕಲ್ಬುರ್ಗಿ ಪ್ರದೇಶದಲ್ಲಿ, ಸರ್ಕಾರಿ ಆದೇಶ ಸಂಖ್ಯೆ (2) ದಿನಾಂಕ 8ನೇ ಅಕ್ಟೋಬರ್ 1949, ಸರ್ಕಾರಿ ಆದೇಶ ಸಂಖ್ಯೆ 2 ದಿನಾಂಕ 22ನೇ ಡಿಸೆಂಬರ್ 1949 ಮತ್ತು ಸರ್ಕಾರಿ ಆದೇಶ ಸಂಖ್ಯೆ ಆರ್ ಡಿಎಫ್ 111 ವಿಓಎ 57 ದಿನಾಂಕ 8ನೇ ಜೂನ್ 1957 ಇವುಗಳ ಮೂಲಕ;

(**iv**) ಮಂಗಳೂರು ಕೊಳ್ಳೇಗಾಲ ಪ್ರದೇಶ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಂಐಎಸ್ 8771 ಆರ್ ಇವಿ ದಿನಾಂಕ 27ನೇ ಏಪ್ರಿಲ್ 1945, ಸರ್ಕಾರಿ ಆದೇಶ ಸಂಖ್ಯೆ 2108 ದಿನಾಂಕ 27ನೇ ಸೆಪ್ಟೆಂಬರ್ 1946 ಮತ್ತು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿಎಫ್ **III** ವಿಓಎ 57 ದಿನಾಂಕ:8ನೇ ಜೂನ್ 1957 ಇವುಗಳ ಮೂಲಕ;

ಅಂಥ ಭತ್ಯ ಅಥವಾ ಹಣದಲ್ಲಿ ಆದೇಶಿಸಲಾದ ಹೆಚ್ಚಳವನ್ನು ಬಿಟ್ಟು ಬಿಡತಕ್ಕುದು;

(ಗ) ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದ ಮೂರು ವರ್ಷಗಳ ಅವಧಿಯಲ್ಲಿ ಕೆಳದರ್ಜೆಯ ಗ್ರಾಮ ಹುದ್ದೆಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಅಂಥ ಹುದ್ದೆಯ ಧಾರಕನು ವಿಧಿಸಿದ ಅಥವಾ ವಿಧಿಸಬಹುದಾದ ರೂಢಿಗತ ಶುಲ್ಕಗಳು ಅಥವಾ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿನ ಪರಿಲಬ್ಧಿಗಳ ಸರಾಸರಿ ನಗದು ಮೌಲ್ಯದ ಆರರಷ್ಟು; ಮತ್ತು ಅಂಥ ನಗದು ಮೌಲ್ಯವನ್ನು ನಿಯಮಿಸಿದ ರೀತಿಯಲ್ಲಿ ನೀರ್ಧರಿಸತಕ್ಕುದು ಮತ್ತು ಅದು ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ವಸ್ತು ರೂಪದಲ್ಲಿ ಸಂದಾಯ ಮಾಡಲು ತಪ್ಪಿದಕ್ಕೆ ವಸೂಲು ಮಾಡಬಹುದಾಗಿದ್ದದಂಥ ಮೊಬಲಗನ್ನು ಮೀರತಕ್ಕುದಲ್ಲ;

ಪರಂತು ಕೆಳದರ್ಜೆಯ ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಿದ ಭೂಮಿಯು ವಿಸ್ತೀರ್ಣದಲ್ಲಿ ಮೂರು ಎಕರೆಗಳಿಗಿಂತ ಕಡಿಮೆಯಿಲ್ಲದಿರುವಾಗ ಸಂದಾಯ ಮಾಡಬೇಕಾದ ಮೊತ್ತವು, ಈ ಖಂಡದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಟವನ್ನು ಮೀರದ ನಗದು ಮೌಲ್ಯದ ಮೂರರಷ್ಟು ಆಗಿರತಕ್ಕದ್ದು.

(2) (**i**) ಕರ್ನಾಟಕ ಗ್ರಾಮ ಹುದ್ದೆಗಲ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ 1967ರ ಪ್ರಾರಂಭದ ತರುವಾಯ ಆದಷ್ಟು ಬೇಗನೆ ಡೆಪ್ಯೂಟಿ ಕಮೀಷನರರನು, ಗ್ರಾಮ ಹುದ್ದೆಯ ಯಾವನೇ ಧಾರಕನಿಗೆ ಅನ್ವಯವಾಗಬಹುದಾದಂಥ (1)ನೇ ಉಪ–ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ರದ್ದುಗೊಳಿಸಲಾಗಿರುವಂಥ ಹುದ್ದೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ಧರಿಸತಕ್ಕದ್ದು.

(**ii**) (1)ನೇ ಉಪ–ಪ್ರಕರಣದ ಮೇರೆಗಿನ ಸಂದಾಯವನ್ನು ಪಡೆಯಲು ಹಕ್ಕುಳ್ಳವನಾದ ಗ್ರಾಮ ಹುದ್ದೆಯ ಧಾರಕನು ನಿಯಮಿಸಬಹುದಾದಂಥ ಕಾಲದೊಳಗೆ ಅಥವಾ ಡೆಪ್ಯೂಟಿ ಕಮೀಷನರನು ಅವನ ವಿವೇಚನಾನುಸಾರ ಅನುಮತಿಸುಬುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ (1)ನೇ ಉಪ–ಪ್ರಕರಣದ ಮೇರೆಗೆ ಸಮದಾಯ ಮಾಡಬೇಕಾದ ಮೊಬಲಗನ್ನು ಯಾವ ಅಂಕಿ ಅಂಶಗಲ ಆಧಾರದ ಮೇಲೆ ನಿರ್ಧರಿಸಲು ಅವನು ಉದ್ದೇಶಿಸಿರುತ್ತಾನೋ ಆ ಅಂಕಿಅಂಶಗಳ ಒಂದು ಪ್ರತಿಗಾಗಿ ಡೆಪ್ಯೂಟಿ ಕಮಿಷನರನಿಗೆ ಬರಹದಲ್ಲಿ ಅರ್ಜಿಯನ್ನು ಮಾಡಿಕೊಳ್ಳಬಹುದು. ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಡೆಪ್ಯೂಟಿ ಕಮಿಷನರುನು ಹಿಂದೆ ಹೇಳಿದ ಅಂಕಿಅಂಶಗಳನ್ನು ಅರ್ಜಿದಾರನಿಗೆ ಒದಗಿದತಕ್ಕುದು ಮತ್ತು ಅನು (**i**) ನೇ ಖಂಡದ ಮೇರೆಗೆ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ ಅರ್ಜಿದಾರನಿಗೆ ಅದರ ಬಗ್ಗೆ ಬರಹದಲ್ಲಿ ಅಥವಾ ಮೌಖಿಕವಾಗಿ, ಮನವಿಯನ್ನು ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಸಹ ಕೊಡತಕ್ಕದ್ದು.

(**ii**) (1)ನೇ ಖಂಡದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಸಂಬಂಧಪಟ್ಟ ಗ್ರಾಮ ಹುದ್ದೆಯ ಧಾರಕನಿಗೆ ಕಳುಹಿಸಿಕೊಡತಕ್ಕುದು.

**10. ವಿಚಾರಣೆಗಳು ಮತ್ತು ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರ ತಕ್ಕುದು:**

ಈ ಅಧಿನಿಯಮದ ಮೇರೆಗೆ ಡೆಪ್ಯೂಟಿ ಕಮಿಷನರ ಮುಂದೆ ನಡೆಯುವ ಎಲ್ಲಾ ವಿಚಾರಣೆಗಳು ಮತ್ತು ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ 193,219 ಮತ್ತು 229ನೇ ಪ್ರಕರನದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳಾಗಿರುವುದಾಗಿ ಭಾವಿಸತಕ್ಕುದು.

**11. ನಿಯಮಗಳು:** (1) ರಾಜ್ಯ ಸರ್ಕಾರವು, ಪುರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪ-ಬಂಧಗಳನ್ನು ಕಾರ್ಯ ಗತಗೊಳಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯದ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧೀಯವರೆಗೆ ಇಡತಕ್ಕುದು ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಡೆರೂ ಸದನಗಳ ಯಾವುದೇ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಎರಡೂ ಸದನಗಳು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿ ಯಾಗಿರತಕ್ಕದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**12. ನಿರಸನ ಮತ್ತು ಉಳಿಸುವಿಕೆಗಳು:** (1) 1ನೇ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಅಧಿನಿಯಮಿತಿಗಳು ಮತ್ತು ಅಂಥ ಗ್ರಾಮ ಹುದ್ದೆಗಳಿಗೆ ಅಥವಾ ಅಂಥ ಗ್ರಾಮ ಹುದ್ದೆಗಳಿಗೆ ಲಗತ್ತಾದ ಉಪಲಬ್ದಿಗಳಿಗೆ ಅವು ಅನ್ವಯವಾಗುವಷ್ಟರ ಮಟ್ಟಿಗೆ, ಕರ್ನಾಟಕ ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಗ್ರಾಮ ಹುದ್ದೆಗೆ ಸಂಬಂಧಪಟ್ಟ ಅಸ್ತಿತ್ವದಲ್ಲಿರುವ ಯಾವುದೇ ಕಾನೂನುನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) II ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳ ಉಪ-ಬಂಧಗಳನ್ನು ಸದರಿ ಅನುಸೂಚಿಯ 4ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವಷ್ಟರ ಮಟ್ಟಿಗೆ ತಿದ್ದುಪಡಿ ಮಾಡತಕ್ಕುದು.

(3) (1) ಮತ್ತು (2)ನೇ ಉಪ ಪ್ರಕರಣದಲ್ಲಿ ಇರುವುದು ಯಾವುದೂ,-

(ಕ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ ಗ್ರಾಮ ಹುದ್ದೆಯ ಧಾರಕ ಅಥವಾ ಇತರ ವ್ಯಕ್ತಿಯು ಈಗಾಗಲೇ ವಹಿಸಿದ ಯಾವುದೇ ಬಾಧ್ಯತೆ ಅಥವಾ ಹೊಣೆಗಾರಿಕೆ;

(ಖ) ಅಂಥ ಬಾಧ್ಯತೆ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆ ಅಥವಾ ಪರಿಹಾರೋಪಾಯ ಇವುಗಳನ್ನು ಬಾಧಿಸುವುದೆಂದು ಭಾವಿಸತಕ್ಕುದಲ್ಲ ಮತ್ತು ಈ ಅಧಿನಿಯಮವನ್ನು

ಅಂಗೀಕರಿಸಲಾಗಿಲ್ಲದಿದ್ದರೆ ಹೇಗೋ ಹಾಗೆ ಯಾವುದೇ ಅಂಥ ವ್ಯವಹರಣೆಯನ್ನು ಮುಂದುವರಿಸಬಹುದು ಮತ್ತು ಯಾವುದೇ ಅಂಥ ಪರಿಹಾರೋಪಾಯವನ್ನು ಜಾರಿಗೊಳಿಬಹುದು.

**ಅನುಸೂಚಿ– I**

**ಪ್ರಕರಣ 12–(1)**

| ವರ್ಷ | ಸಂಖ್ಯೆ | ಚಿಕ್ಕಹೆಸರು | ನಿರಸನದ ವ್ಯಾಪ್ತಿ |
|---|---|---|---|
| 1908 | **IV** | ಮೈಸೂರು ಗ್ರಾಮ ಹುದ್ದೆಗಳ ಅಧಿನಿಯಮ, 1908 | ಇಡೀ |
| 1895 | **III** | ಮದ್ರಾಸ್ ಅನುವಂಶಿಕ ಗ್ರಾಮ ಹುದ್ದೆಗಳ ಅಧಿನಿಯಮ, 1895 | ಅದೇ |
| 1874 | **III** | ಮುಂಬಯಿ ಅನುವಂಶಿಕ ಹುದ್ದೆಗಳ ಅಧಿನಿಯಮ, 1874 | ಅದೇ |
| 1886 | **V** | ಮುಂಬಯಿ ಅನುವಂಶಿಕ ಹುದ್ದೆಗಳು (ತಿದ್ದುಪಡಿ) ಅಧಿನಿಯಮ, 1886 | ಅದೇ |
| 1894 | **II** | ಮದ್ರಾಸು ಮಾಲೀಕತ್ವದ ಎಸ್ಟೇಟುಗಳ ಗ್ರಾಮ ಸೇವಾ ಅಧಿನಿಯಮ, 1894 | ಅದೇ |
| 1802 | **XXIX** | ಮದ್ರಾಸ್ ಕರ್ನಾಮುಗಳ ರೆಗ್ಯೂಲೇಷನ್, 1802 | ಅದೇ |

**ಅನುಸೂಚಿ– II**

**ಪ್ರಕರಣ 12–(2)**

| ವರ್ಷ | ಸಂಖ್ಯೆ | ಚಿಕ್ಕಹೆಸರು | ತಿದ್ದುಪಡಿಯ ವ್ಯಾಪ್ತಿ |
|---|---|---|---|
| 1888 | **IV** | ಮೈಸೂರು ಭೂ ಕಂದಾಯ ಸಂಹಿತೆ 1888 | 14ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡದನ್ನು ಪ್ರತಿಯೋಜಿಸತಕ್ಕುದು. ಎಂದರೆ:–<br>“14. ವೈತನಿಕ ಪಟೇಲ ಮತ್ತು ಗ್ರಾಮ ಲೆಕ್ಕಿಗನ ನೇಮಕಾತಿ.<br>ಡೆಪ್ಯೂಟಿ ಕಮಿಷನರಿನಿಗೆ ರಾಜ್ಯಸರ್ಕಾರದ ಸಾಮಾನ್ಯ ಆದೇಶಗಳ ಮೇರೆಗೆ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಸಮೂಹಕ್ಕೆ ಒಬ್ಬ ವೈತನಿಕ ಪಟೇಲ ಅಥವಾ ಗ್ರಾಮ ಲೆಕ್ಕಿಗನನ್ನು ಅಥವಾ ಅವರಿಬ್ಬರನ್ನೂ ನೇಮಕ ಮಾಡುವುದು ಕಾನೂನು ಸಮ್ಮತವಾಗಿತಕ್ಕುದು. ಗ್ರಾಮಲೆಕ್ಕಿಗ ಮತ್ತು ಪಟೇಲನು ಇಲ್ಲಿ ಇನ್ನು ಮುಂದೆ ಈ ಅಧಿನಿಯಮದಲ್ಲಿ ನಿಯಮಿಸಿದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ನಿಯಮಿಸಿದ ಗ್ರಾಮಲೆಕ್ಕಿಗ ಅಥವಾ ಪಟೇಲ ಇವರ ಕರ್ತವ್ಯಗಳನ್ನು ಒಳಗೊಂಡು ಎಲ್ಲ ಕರ್ತವ್ಯಗಳನ್ನು ನೆರವೇರಿಸತಕ್ಕುದು ಮತ್ತು ಅವನು ಅಧೀನ ರೆವಿನ್ಯೂ ಅಧಿಕಾರಿಗಳಿಗೆ |

| | | | |
|---|---|---|---|
| | | | ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮಗಳ ಮೇರೆಗೆ ಪದಧಾರಣ ಮಾಡತಕ್ಕುದು. |
| 1879 | **V** | ಮುಂಬಯಿ ಭೂ ಕಂದಾಯ ಸಂಹಿತೆ, 1879 | (1) 16ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕುದು ಎಂದರೆ:<br><br>16. ವೈತನಿಕ ಪಟೇಲ ಮತ್ತು ಗ್ರಾಮ ಲೆಕ್ಕಿಗನ ನೇಮಕಾತಿ.<br>ಡೆಪ್ಯೂಟಿ ಕಮೀಷನರನಿಗೆ ರಾಜ್ಯ ಸರ್ಕಾರದ ಸಾಮಾನ್ಯ ಆದೇಶಗಳ ಮೇರೆಗೆ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಸಮೂಹಕ್ಕೆ ಒಬ್ಬ ವೈತನಿಕ ಪಟೇಲ ಅಥವಾ ಗ್ರಾಮ ಲೆಕ್ಕಿಗನನ್ನು ಅಥವಾ ಅವರಿಬ್ಬರನ್ನೂ ನೇಮಕ ಮಾಡುವುದು ಕಾನೂನು ಸಮ್ಮತವಾಗಿರತಕ್ಕುದು. ಆ ಗ್ರಾಮಲೆಕ್ಕಿಗ ಮತ್ತು ಪಟೇಲನು ಇಲ್ಲಿ ಇನ್ನು ಮುಂದೆ ಈ ಅಧಿನಿಯಮದಲ್ಲಿ ನಿಯಮಿಸಿದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ನಿಯಮಿಸಿದ ಗ್ರಾಮಲೆಕ್ಕಿಗ ಅಥವಾ ಪಟೇಲ ಇವರ ಕರ್ತವ್ಯಗಳನ್ನೂ ಒಳಗೊಂಡು ಎಲ್ಲ ಕರ್ತವ್ಯಗಳನ್ನು ನೇರವೇರಿಸತಕ್ಕುದು ಮತ್ತು ಅವನು ಅಧೀನ ರೆವಿನ್ಯೂ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮಗಳ ಮೇರೆಗೆ ಪದಧಾರನ ಮಾಡತಕ್ಕುದು.<br><br>(**ii**) 58, 85 ಮತ್ತು 94–ಕ ಪ್ರಕರಣಗಳಲ್ಲಿ ಅನುವಂಶಿಕ ಪಟೇಲ ಎಂಬ ಪದಗಳು ಅವು ಸಂಭವಿಸುವಲ್ಲೆಲ್ಲಾ "ಪಟೇಲ" ಎಂಬ ಪದವನ್ನು ಪ್ರತಿಯೋಜಿಸತಕ್ಕುದು. |
| 1317 ಫಸ್ಲಿ | **VIII** | ಹೈದರಾಬಾದ್ ಭೂ ಕಂದಾಯ ಅಧಿನಿಯಮ, 1317 ಫಸ್ಲಿ | 15ನೇ ಪ್ರಕರಣದ ತರುವಾಯ ಈ ಕೆಳಕಂಡಂತೆ 15ಕ ಪ್ರಕರಣವನ್ನು ಸೇರಿಸತಕ್ಕುದು–<br><br>"15–ಕ ಗ್ರಾಮ ಅಧಿಕಾರಿಯ ನೇಮಕಾತಿ ಡೆಪ್ಯೂಟಿ ಕಮಿಷನರನಿಗೆ ರಾಜ್ಯ ಸರ್ಕಾರದ ಸಾಮಾನ್ಯ ಆದೇಶಗಳ ಮೇರೆಗೆ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಸಮೂಹಕ್ಕೆ ಒಬ್ಬ ವೈತನಿಕ ಗ್ರಾಮ ಅಧಿಕಾರಿಯನ್ನು ಅಥವಾ ಅಧಿಕಾರಿಗಳನ್ನು ನೇಮಕ ಮಾಡುವುದು ಕಾನೂನು ಸಮ್ಮತವಾಗಿರತಕ್ಕುದು. ಆ ಗ್ರಾಮ ಅಧಿಕಾರಿಯು ಇಲ್ಲಿ ಇನ್ನು ಮುಂದೆ ಈ ಅಧಿನಿಯಮದಲ್ಲಿ ನಿಯಮಿಸಿದ |

| | | | |
|---|---|---|---|
| | | | ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ನಿಯಮಿಸಿದ ಗ್ರಾಮ ಅಧಿಕಾರಿಯ ಕರ್ತವ್ಯಗಳನ್ನು ಒಳಗೊಂಡು ಎಲ್ಲಾ ಕರ್ತವ್ಯಗಳನ್ನು ನೇರವೇರಿಸತಕ್ಕುದು ಮತ್ತು ಅವನು ಅಧೀನ ರೆವಿನ್ಯೂ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮಗಳ ಮೇರೆಗೆ ಪದಧಾರಣ ಮಾಡತಕ್ಕುದು. |
| 1899 | **I** | ಕೊಡಗು ಭೂಮಿ ಮತ್ತು ಕಂದಾಯ ರೆಗ್ಯೂಲೇಷನ್, 1899 | 24ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕುದು ಎಂದರೆ:– <br><br> "24ನೇ ಗ್ರಾಮ ಅಧಿಕಾರಿಯ ನೇಮಕಾತಿ. ಡೆಪ್ಯೂಟಿ ಕಮೀಷನರನಿಗೆ ರಾಜ್ಯ ಸರ್ಕಾರದ ಸಾಮಾನ್ಯ ಆದೇಶಗಳ ಮೇರೆಗೆ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಸಮೂಹಕ್ಕೆ ಒಬ್ಬ ವೈತನಿಕ ಗ್ರಾಮ ಅಧಿಕಾರಿಯನ್ನು ಅಥವಾ ಅಧಿಕಾರಿಗಳನ್ನು ನೇಮಕ ಮಾಡುವುದು ಕಾನೂನು ಸಮ್ಮತವಾಗಿರತಕ್ಕುದು. ಆ ಗ್ರಾಮ ಅಧಿಕಾರಿಯು ಇಲ್ಲಿ ಇನ್ನು ಮುಂದೆ ಇ ಅಧಿನಿಯಮದಲ್ಲಿ ನಿಯಮಿಸಿದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ನಿಯಮಿಸಿದ ಗ್ರಾಮ ಅಧಿಕಾರಿಯ ಕರ್ತವ್ಯಗಳನ್ನು ಒಳಗೊಂಡು ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕುದು ಮತ್ತು ಅವನು ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಿಸಿದ ನಿಯಮಗಳ ಮೇರೆಗೆ ಪದಧಾರಣೆ ಮಾಡತಕ್ಕುದು." |

**ಅಧಿಸೂಚನೆ**

**(1963ರ ಜನವರಿ 17ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ ಭಾಗ IV ವಿಭಾಗ2–ಗ ನಲ್ಲಿ ಪ್ರಕಟಿಸಲಾಗಿದೆ)**

**ಸಂಖ್ಯೆ ಆರ್‌ಡಿ 327 ಜಿವಿಒ 62 ದಿನಾಂಕ, ಬೆಂಗಳೂರು 9ನೇ ಜನವರಿ 1963**

**(ಪುಷ್ಯ 19, ಶಕ ವರ್ಷ 1884)**

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ ಸಂಖ್ಯೆ 1961ರ 14) 1ನೇ ಪ್ರಕರಣದ (3) ನೇ ಉಪ–ಪ್ರಕರಣದ ಮೂಲಕ ಪ್ರಧಾನಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1963 ರ ಫೆಬ್ರವರಿ ಮೊದಲನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕಂಥ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರವಾಗಿ ಅವರ ಹೆಸರಿನಲ್ಲಿ,

**ಪಿ. ನಾಗೇಶ್‌ರಾವ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ.

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

**ಕರ್ನಾಟಕ ಅಧಿನಿಯಮ, 1968ರ ಸಂಖ್ಯೆ 8**

(1968ರ ಜನವರಿ ಹದಿನೆಂಟನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಟಕವಾಯಿತು)

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1967

(1968ರ ಜನವರಿ ಒಂಭತ್ತನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಸ್ವೀಕರಿಸಿತು)

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 ಇದನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ, 1961ರ ಸಂಖ್ಯೆ 14) ಇದನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1967 ಎಂದು ಕರೆಯತಕ್ಕುದು.

(2) ಇದು 1967ರ ಸೆಪ್ಟೆಂಬರ್ ಹನ್ನೆರಡನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

[2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ]

**3. ಉಳಿಸುವಿಕೆಗಳು:–** ಮೂಲತಃ ಅಧಿನಿಯಮಿತವಾದಂತೆ ಮೂಲ ಅಧಿನಿಯಮದ 9ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿ ಏನೇ ಇದ್ದೂಗ್ಯೂ ಮೂಲ ಅಧಿನಿಯಮದ ಪ್ರಾರಂಭದ ತರುವಾಯ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಸದರಿ ಉಪ–ಪ್ರಕರಣದ ಮೇರೆಗೆ ಡೆಪ್ಯೂಟಿ ಕಮಿಷನರನಿಗೆ ಮಾಡಿಕೊಂಡ ಅರ್ಜಗಳನ್ನು ಸಿಂಧುವಾಗಿ ಮಾಡಿಕೊಂಡಿರುವುದಾಗಿ ಆಭವಿಸತಕ್ಕುದು ಮತ್ತು ಅವುಗಳನ್ನು ಈ ಅಧಿನಿಯಮವನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ವಿಲೆ ಮಾಡಬಹುದು.

**4. ಕರ್ನಾಟಕ ಅಧ್ಯಾದೇಶ 1974ರ 4 ಇದರ ನಿರಸನ:–** ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧ್ಯಾದೇಶ, 1967 (ಕರ್ನಾಟಕ ಅಧ್ಯಾದೇಶ 1967ರ ಸಂಖ್ಯೆ 4) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**ಕರ್ನಾಟಕ ಅಧಿನಿಯಮ 1978ರ ಸಂಖ್ಯೆ 13**

**(1978ರ ಆಗಸ್ಟ್ ಏಳನೇ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ ಅಧಿನಿಯಮ, 1978

(1978ರ ಆಗಸ್ಟ್ ಏಳನೇ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಸ್ವೀಕರಿಸಿತು)

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1961 ರ ಸಂಖ್ಯೆ 14) ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ:

ಭಾರತ ಗಣರಾಜ್ಯದ ಇಪ್ಪತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1978 ಎಂದು ಕರೆಯತಕ್ಕದು.

(2) ಈ ಪ್ರಕರಣ, 2ನೇ ಪ್ರಕರಣ, 3ನೇ ಪ್ರಕರಣ ಮತ್ತು 4ನೇ ಪ್ರಕರಣದಲ್ಲಿನ 7ಕ ಪ್ರಕರಣಗಳು ಈ ಕೂಡಲೇ ಜಾರಿಗೆ ಬರತಕ್ಕದು ಮತ್ತು ಇತರ ಉಪಬಂಧಗಳು 1975ರ ಡಿಸೆಂಬರ್ ಇಪ್ಪತ್ತನಾಲ್ಕನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದು.

**2. 3ನೇ ಪ್ರಕರಣದ ತಿದ್ದುಪಡಿ:** (ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**3. 5ನೇ ಪ್ರಕರಣದ ತಿದ್ದುಪಡಿ :** (ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**4. 7ನೇ ಪ್ರಕರಣಕ್ಕೆ ಬದಲಾಗಿ ಹೊಸ ಪ್ರಕರಣದ ಪ್ರತಿಯೋಜನೆ:** (ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**5. ಉಳಿಸುವಿಕೆಗಳು :** ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮೂಲ ಅಧಿನಿಯಮವು ಇದ್ದಂತೆ ಅದರ ಪ್ರಕರಣ 7ರ (1)ನೇ ಉಪ–ಪ್ರಕರಣದ ಪರಂತುಕದ ಮೇರೆಗೆ ಅನಧಿಕೃತ ಹಿಡುವಳಿದಾರರಿಗೆ ಭೂಮಿಯ ಮರುಮಂಜೂರಾತಿಗೆ ಸಂಬಂಧಪಟ್ಟ ಇತ್ಯರ್ಥದಲ್ಲಿರುವ ಎಲ್ಲಾ ಅರ್ಜಿಗಳು ಮತ್ತು ವ್ಯವಹರಣೆಗಳು ಪರಿಣಾಮಕಾರಿಯಾಗತಕ್ಕುದಲ್ಲ ಮತ್ತು ಕೊನೆಗೊಳ್ಳುತಕ್ಕುದು.

**6. ಕರ್ನಾಟಕ ಅಧ್ಯಾದೇಶ, 1978ರ ಸಂಖ್ಯೆ 7 ಇದರ ನಿರಸನ : –** ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧ್ಯಾದೇಶ, 1973 (ಕರ್ನಾಟಕ ಅಧ್ಯಾದೇಶ 1978ರ ಸಂಖ್ಯೆ 7) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಕೊಳ್ಳಲಾಗಿದೆ ಎಂದು ಭಾವಿಸತಕ್ಕದು.

**ಕರ್ನಾಟಕ ಅಧಿನಿಯಮ 1984 ರ ಸಂಖ್ಯೆ 27**

(1984ರ ಮೇ ನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು).

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1984

(1984ರ ಏಪ್ರಿಲ್ ಹದಿಮೂರನೇ ದಿವಸದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಿತು)

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 ಇದನನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ, 1961ರ 14) ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು :–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1984 ಎಂದು ಕರೆಯತಕ್ಕುದು

(2) ಇದು ಈ ಕೂಡಲೇ ಜಾರಿಗೆ ಬರತಕ್ಕುದು.

**2. 2ನೇ ಪ್ರಕರಣದ ತಿದ್ದುಪಡಿ : –** ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1961ರ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಇದರ 2ನೇ ಪ್ರಕರಣದಲ್ಲಿ (ಜ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ:–

(ಇದನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**3. 5ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ (3)ನೇ ಉಪ–ಪ್ರಕರಣದ ತರುವಾಯ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕುದು. ಎಂದರೆ:–

(ಇದನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

## ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ನಿಯಮಗಳು, 1961

## ನಿಯಮಗಳ ಅನುಕ್ರಮಣಿಕೆ

### ಪ್ರಸ್ತಾವನೆ

**ನಿಯಮಗಳು**


1. ಹೆಸರು

2. ಪರಿಭಾಷೆಗಳು

3. 3ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ರೀತಿ

4. 5 ಮತ್ತು 6ನೇ ಪ್ರಕರಣಗಳ ಮೇರೆಗೆ ಅಧಿಭೋಗದ ಬೆಲೆಯನ್ನು ಸಂದಾಯ ಮಾಡುವ ಕಾಲ ಮತ್ತು ರೀತಿ

5. ಮರು ಮಂಜೂರಾತಿಗಾಗಿ ಅರ್ಜಿ

5ಕ. ಅನಧಿಕೃತ ಹಿಡುವಳಿದಾರ ಅಥವಾ ಅಕ್ರಮ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯನ್ನು ಹೊರಹಾಕುವುದು

6. 9ನೇ ಪ್ರಕರಣದ ಮೇರೆಗೆ ಪರಿಹಾರದ ನಿರ್ಧರಣೆ

7. ವಿಚಾರಣೆಗಳನ್ನು ನಡೆಸುವಲ್ಲಿ ಡೆಪ್ಯೂಟಿ ಕಮಿಷನರನ ಅಧಿಕಾರಗಳು ನಮೂನೆಗಳು

**ಅಧಿಸೂಚನೆ**

**ಸಂಖ್ಯೆ ಆರ್‌ಡಿ 118 ಜಿವಿಎ 61 ದಿನಾಂಕ ಬೆಂಗಳೂರು, 19/20ನೇ ಡಿಸೆಂಬರ್ 1962**

ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1961 ರ 14)ದ 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನನು ಈ ಮೂಲಕ ರಚಿಸುತ್ತದೆ. ಅದರ ಕರಡನ್ನು ಸದರಿ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ 30ನೇಯ ನವೆಂಬರ್ 1961ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲಾಗಿದೆ ಎಂದರೆ:-

**1. ಹೆಸರು:-** ಈ ನಿಯಮಗಳನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ನಿಯಮಗಳು, 1961 ಎಂದು ಕರೆಯತಕ್ಕುದು.

**2. ಪರಿಭಾಷೆಗಳು:** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದೆ ಹೊರತು-

(ಕ) "ಅಧಿನಿಯಮ" ಎಂದರೆ ಕರ್ನಾಟಕ ಗ್ರಾಮಹುದ್ದೆಗಳ ರದ್ದಿಯಾತಿ ಅಧಿನಿಯಮ, 1961

(ಖ) "ಪ್ರಕರಣ" ಎಂದರೆ ಅಧಿನಿಯಮದ ಒಂದು ಪ್ರಕರಣ

**3. 3ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ರೀತಿ:** (1) ಗ್ರಾಮ ಹುದ್ದೆಯಲ್ಲಿ ಅಥವಾ ಅಂಥ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಿದ ಅಥವಾ ಅದಕ್ಕೆ ಲಗತ್ತಿಸಲಾದ ಯಾವುದೇ ಭೂಮಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಮತ್ತು 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಪ್ರಶ್ನೆಯ ಬಗ್ಗೆ ತೀರ್ಮಾನವನ್ನು ಇಚ್ಚಿಸುವ ಯಾವನೇ ವ್ಯಕ್ತಿಯು ಡೆಪ್ಯೂಟಿ ಕಮೀಷನರನಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು.

(2) (1) ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕುದು:-

**(i)** ಗ್ರಾಮ ಅಥವಾ ಗ್ರಾಮಗಳ ಹೆಸರು ;

**(ii)** ಅರ್ಜಿದಾರರ ಹೆಸರು ಮತ್ತು ವಿಳಾಸ ;

**(iii)** ಯಾವ ಪ್ರಶ್ನೆ ಅಥವಾ ಪ್ರಶ್ನೆಗಳ ಬಗ್ಗೆ ತೀರ್ಮಾನವನ್ನು ಕೋರಲಾಗಿದೆಯೊ ಆ ಪ್ರಶ್ನೆ ಅಥವಾ ಪ್ರಶ್ನೆಗಳು ;

**(iv)** ಬರಾವರ್ದಾರನ ಹೆಸರು ;

**(v)** ಯಾವುದಕ್ಕೆ ಸಂಬಂಧಿಸಿದಂತೆ ಅಂಥ ಪ್ರಶ್ನೆಯು ಉದ್ಭವಿಸುವುದೋ ಆ ಗ್ರಾಮ ಹುದ್ದೆಯಲ್ಲಿ ಅಥವಾ ಅಂಥ ಹುದ್ದೆಗೆ ಸಂಬಂಧಪಟ್ಟ ಯಾವುದೇ ಭೂಮಿಯಲ್ಲಿ ಅರ್ಜೀದಾರನು ಹೊಂದಿರುವ ಹಿತಾಸಕ್ತಿಯ ಸ್ವರೂಪ;

**(vi)** ಆ ವಿಷಯದಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಇತರ ವ್ಯಕ್ತಿಗಳು ಯಾರಾದರು ಇದ್ದರೆ, ಅವರ ಹೆಸರುಗಳು ; ಮತ್ತು

**(vii)** ಆ ಕ್ಲೇಮನ್ನು ಸಮರ್ಥಿಸುವ ಇತರ ವಿವರಗಳು.

(3) (1)ನೇ ಉಪನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇರೆಗೆ ಡೆಪ್ಯೂಟಿ ಕಮಿಷನರನು ಅಗತ್ಯವಾಗಬಹುದಾದ ಯಾವುದೇ ಇನ್ನೂ ಹೆಚ್ಚಿನ ವಿವರಗಳನ್ನು ಒದಗಿಸಲು ಅರ್ಜಿದಾರನನ್ನು ಕೋರಬಹುದು ಮತ್ತು ಅಂಥ ವಿವರಗಳನ್ನು ಒದಗಿಸುವುದಕ್ಕಾಗಿ ಒಂದು ದಿನಾಂಕವನ್ನು ಗೊತ್ತುಪಡಿಸಬಹುದು. ಕೋರಲಾದ ವಿವರಗಳನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ ಒದಗಿಸಿದಾಗ ಡೆಪ್ಯೂಟಿ ಕಮೀಷನರನು ಚುನಾವಣೆಗಾಗಿ ಒಂದು ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಅದರ ಬಗ್ಗೆ ನೋಟೀಸನ್ನು ಅರ್ಜಿದಾರನಿಗೆ ಮತ್ತು ಆ ವಸ್ತು ವಿಷಯದಲ್ಲಿ ಹಿತಾಸಕ್ತಿಯನ್ನು ಹೊಂದಿರುವನೆಂದು ಅರ್ಜಿಯಲ್ಲಿ ನಮೂದಿಸಿದ ಇತರ ವ್ಯಕ್ತಿಗಳಿಗೆ ಕೊಡತಕ್ಕದು. ಆ ನೋಟೀಸಿನ ಒಂದು ಪತ್ರಿಯನ್ನು ಡೆಪ್ಯೂಟಿ ಕಮಿಷನರನ ಕಚೇರಿಯ ನೋಟೀಸು ಬೋರ್ಡಿನ ಮೇಲೆ ಸಹ ಅಂಟಿಸತಕ್ಕದು.

(4) (3)ನೇ ಉಪನಿಯಮದ ಮೇರೆಗಿನ ನೋಟೀಸನ್ನು ಸಂಹಿತೆಯಲ್ಲಿ ನೋಟೀಸುಗಳನ್ನು ಜಾರಿ ಮಾಡುವುದಕ್ಕಾಗಿ ನಿಯಮಿಸಿದ ರೀತಿಯಲ್ಲಿ ಜಾರಿಮಾಡತಕ್ಕುದು.

(5) ಚುನಾವಣೆಗಾಗಿ ಗೊತ್ತುಪಡಿಸಿದ ದಿನಾಂಕದಂದು ಅಥವಾ ಆ ಪ್ರಕರಣವನ್ನು ಮುಂದೂಡಬಹುದಾದಂಥ ಇತರ ದಿನಾಂಕದಂದು ಡೆಪ್ಯೂಟಿ ಕಮೀಷನರನು ಸಂಹಿತೆಯ ಮೇರೆಗೆ ವಿದ್ಯುಕ್ತ ವಿಚಾರಣೆಗಾಗಿ ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸತಕ್ಕುದು ಮತ್ತು ಆ ತರುವಾಯ ಆದೇಶದ ಮೂಲಕ ಆ ಪ್ರಶ್ನೆಗಳನ್ನು ತೀರ್ಮಾನಿಸತಕ್ಕುದು.

(6) (5)ನೇ ಉಪ ನಿಯಮದ ಮೇರೆಗಿನ ಪ್ರತಿಯೊಂದು ತೀರ್ಮಾನ ಅಥವಾ ಆದೇಶವು. ಅದನ್ನು ಯಾವ ಕಾರಣಗಳ ಮೇಲೆ ಮಾಡಲಾಗಿದೆಯೊ ಆ ಕಾರಣಗಳ ಪೂರ್ಣ ನಿರೂಪಣೆಯನ್ನು ಒಳಗೊಂಡಿರತಕ್ಕುದು ಮತ್ತು ಅದನ್ನು ಆ ಆದೇಶವನ್ನು ಮಾಡುವ ಅಧಿಕಾರಿಯು ಬರೆಯತಕ್ಕುದು ಮತುತ ಅದಕ್ಕೆ ರುಜು ಮಾಡುತಕ್ಕುದು ಅಥವಾ ಅಂಥ ಅಧಿಕಾರಿಯು ಅದನ್ನು ಹೇಳಿ ಬರೆಸತಕ್ಕುದು. ಆ ಸಂದರ್ಭದಲ್ಲಿ ಆ ಬಗ್ಗೆ ಅಂಥ ಅಧಿಕಾತಿಯು ಅವನ ಬರವಣಿಗೆಯಲ್ಲಿ ಪ್ರಮಾಣೀಕರಣವನ್ನು ಮಾಡತಕ್ಕುದು ಮತ್ತು ರುಜು ಮಾಡತಕ್ಕುದು.

**4. 5 ಮತ್ತು 6ನೇ ಪ್ರಕರಣಗಳ ಮೇರೆಗೆ ಅಧಿಭೋಗದ ಬೆಲೆಯನ್ನು ಸಂದಾಯ ಮಾಡುವ ಕಾಲ ಮತ್ತು ರೀತಿ:–** (1) 5 ಮತ್ತು 6ನೇ ಪ್ರಕರಣಗಳಲ್ಲಿ ಉಲ್ಲೇಖಿಸಿರುವ ಅಧಿಭೋಗ ಬೆಲೆಯನ್ನು ಆ ಮೊಬಲಗನ್ನು ಚಲನ್ ಮೂಲಕ ಖಜಾನೆಯಲ್ಲಿ ಇರಸಾಲು ಮಾಡುವ ಅಥವಾ ತಾಲ್ಲೂಕ ಕಛೇರಿಯಲ್ಲಿ ಅದನ್ನು ಇಡುವ ಮೂಲಕ ಒಂದೇ ಗಂಟಿನಲ್ಲಿ ಅಥವಾ 1984ರ ಮಾರ್ಚ್ 31ರೊಳಗೆ, ಮೊದಲನೆಯದನ್ನು ಸಂದಾಯ ಮಾಡಬೇಕಾದ ಮೂರು ಸಮಾನ ವಾರ್ಷಿಕ ಕಂತುಗಳಲ್ಲಿ ಸಂದಾಯ ಮಾಡಬಹುದು ಮತ್ತು ಅದಕ್ಕಾಗಿ ರಸೀತಿಯನ್ನು ಪಡೆದುಕೊಳ್ಳಬಹುದು.

(2) ಡೆಪ್ಯೂಟಿ ಕಮೀಷನರನು. ಅಧಿಭೋಗದ ಬೆಲೆಯ ಮೊದಲ ಕಂತಿನ ಸಂದಾಯಕ್ಕಾಗಿ ನಿಗಧಿಪಡಿಸಿದ ದಿನಾಂಕಕ್ಕೆ ಸಾಕಷ್ಟು ಮುಂಚಿತವಾಗಿ ಗ್ರಾಮ ಹುದ್ದೆಯ ಪ್ರತಿಯೊಬ್ಬ ಧಾರಕನಿಗೆ ಅಂಥ ಸಂದಾಯವನ್ನು ಮಾಡಬೇಕಾದಂಥ ದಿನಾಂಕವನ್ನು ತಿಳಿಸುವ ಒಂದು ನೋಟಿಸನ್ನು ಜಾರಿಗೊಳಿಸುವಂತೆ ಮಾಡತಕ್ಕುದು. ಅವನು ಆ ಅಧಿಭೋಗದ ಬೆಲೆಯ ಎರಡನೇ ಮತ್ತುಮೂರನೇ ಕಂತುಗಳ ಸಂದಾಯಕ್ಕೆ ಸಂಬಂಧಿಸಿದಂತೆ ಗ್ರಾಮ ಹುದ್ದೆಯ ಪ್ರತಿಯೊಬ್ಬ ಧಾರಕನಿಗೆ ಅಂಥದೇ ನೋಟೀಸನ್ನು ಜಾರಿಗೊಳಿಸುವಂತೆಯೂ ಸಹ ಮಾಡತಕ್ಕದು. ಈ ನಿಯಮದ ಮೇರೆಗಿನ ನೋಟೀಸನ್ನು ಸಂಹಿತೆಯ ಮೇರೆಗೆ ನೋಟೀಸುಗಳ ಜಾರಿಗಾಗಿ ನಿಯಮಿಸಿದ ರೀತಿಯಲಲ್ಲಿ ಜಾರಿಗೊಳಿಸತಕ್ಕುದು.

(3) (1) ಮತ್ತು (2)ನೇ ಉಪ–ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ಮೇಲುನೋಟಕ್ಕೆ ಪರಿಹಾರಕ್ಕಾಗಿನ ಸಿಂಧುವಾದ ಕ್ಲೆಮನ್ನು ತೋರಿಸುವ 9ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿ ಅವನು 6ನೇ ನಿಯಮದ ಮೇರೆಗೆ ಮಾಡಿಕೊಂಡ ಅರ್ಜಿಯು ಇತ್ಯರ್ಥದಲ್ಲಿದೆ ಎಂದು ಡೆಪ್ಯೂಟಿ ಕಮೀಷನರಿಂದ ಪ್ರಮಾಣಪತ್ರವನ್ನು ಗ್ರಾಮ ಹುದ್ದೆಯ ಧಾರಕನು ಹಾಜರುಪಡಿಸಲುವಲ್ಲಿ, ಅಂಥ ಅಧಿಭೋಗದ ಬೆಲೆಯನ್ನು ಪರಿಹಾರ ರೂಪವಾಗಿ ಯಾವುದೇ ಮೊಬಗಲನ್ನು ಕೊಟ್ಟಿರದಿದ್ದರೆ ಅರ್ಜಿಯ ತೀರ್ಮನದ ದಿನಾಂಕದಿಂದ ಅಥವಾ ಆ ಗರಾಮ ಹುದ್ದೆಯ ಧಾರಕನಿಗೆ ಅಂಥ ಮೊಬಲಗನ್ನು ಕೊಟ್ಟಿರುವಂಥ ದಿನಾಂಕದಿಂದ ಒಂದು ತಿಂಗಳೊಳಗೆ ಸಂದಾಯ ಮಾಡಬಹುದು.

**5. ಮರುಮಂಜೂರಾತಿಗಾಗಿ ಅರ್ಜಿ:**

(1) (ಕ) ಡೆಪ್ಯೂಟಿ ಕಮೀಷನರನು, 4ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಭೂಮಿಯ ಮರು ಮಂಜೂರಾತಿಗೆ ಹಕ್ಕುಳ್ಳ ವಯಕ್ತಿಯು, 4ನೇ ನಿಯಮದ ಮೇರೆಗೆ ಪೂರ್ಣ ಅಧಿಭೋಗದ ಬೆಲೆಯನ್ನು ಸಂದಾಯ ಮಾಡಿರುವ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಂಡ ತರುವಾಯ, ಅಂಥ ಪ್ರತಿಯೊಬ್ಬ ವ್ಯಕ್ತಿಗೆ 4ನೇ ನಿಯಮದ ಮೇರೆಗೆ ಪೂರ್ಣ ಅಧಿಭೋಗದ ಬೆಲೆಯನ್ನು ಸಂದಾಯ ಮಾಡಿದ ದಿವಸದಿಂದ ಮೂರು ತಿಂಗಳೊಳಗೆ ಅಂಥ ಮರುಮಂಜೂರಾತಿಗಾಗಿ ಡೆಪ್ಯೂಟಿ ಕಮೀಷನರನಿಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದುದೆಂದು ತಿಳಿಸಿ ಒಂದು ನೋಟೀನ್ನು ಜಾರಿ ಮಆಡುವಂತೆ ಮಾಡತಕ್ಕದ್ದು. ಈ ನಿಯಮದ ಮೇರೆಗಿನ ನೋಟೀಸನ್ನು ಸಂಹಿತೆಯ ಮೇರೆಗೆ ನೋಟೀಸುಗಳ ಜಾರಿಗಾಗಿ ನಿಯಮಿಸಿದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(ಖ) 4ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಭೂಮಿಯ ಮರುಮಂಜೂರಾತಿಗಾಗಿ ಹಕ್ಕುಳ್ಳ ವ್ಯಕ್ತಿಯು, 4ನೇ ನಿಯಮದ ಮೇರೆಗೆ ಪೂರ್ಣ ಅಧಿಭೋಗದ ಬೆಲೆಯನ್ನು ಸಂದಾಯ ಮಾಡಿದ ದಿನಾಂದಿಂದ ಮೂರು ತಿಂಗಳುಗಳೊಳಗೆ ಅಂಥ ಮರುಮಂಜೂರಾತಿಗಾಗಿ ಡೆಪ್ಯೂಟಿ ಕಮೀಷನರನಿಗೆ ಅರ್ಜಿಯನ್ನು ಮಾಡಿ ಕೊಳ್ಳತಕ್ಕದ್ದು.

ಪರಂತು ಡೆಪ್ಯೂಟಿ ಕಮೀಷನರನು ಸಾಕಷ್ಟು ಕಾರಣಕ್ಕಾಗಿ ಆ ಅರ್ಜಿಯನ್ನು ಮಾಡಿಕೊಳ್ಳುವುದರಲ್ಲಿನ ವಿಳಂಭವನ್ನು ಮನ್ನಾ ಮಾಡಬಹುದು.

(2) (1) ನೇ ಉಪ–ನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯೊಂದಿಗೆ ಯಾವ ಭೂಮಿಯ ಮರುಮಂಜೂರಾತಿಯನ್ನು ಕ್ಲೇಮು ಮಾಡಲಾಗಿದೆಯೋ ಆ ಭುಮಿಗೆ ಸಂಭಂಧಿಸಿದಂತೆ ಹಕ್ಕುಗಳ ದಾಖಲೆ ಮತ್ತು ಇನಾಮು ರಿಜಿಸ್ಟರಿನ ಉದ್ಧೃತ ಭಾಗಗಳು ಇರತಕ್ಕದ್ದು ಮತ್ತು ಅದು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು. ಎಂದರೆ:

(i) ಭೂಮಿ ಇರುವಂಥ ಗ್ರಾಮ ಅಥವಾ ಗ್ರಾಮಗಳ ಹೆಸರು;

(ii) ಸರ್ವೆ ನಂಬರ್, ವಿಸ್ತೀರ್ಣ, ಕಂದಾಯ, ಜೋಡಿ ಅಥವಾ ಸರ್ಕಾರಕ್ಕೆ ಸಂದಾಯ ಮಾಡಲಾಗಿತ್ತಿದ್ದಂಥ ಇತರ ಮೊಬಲಗುಗಳಂಥ ಭೂಮಿಯ ವಿವರಗಳು:

(iii) ಅರ್ಜಿದಾರನು ಹಿಡುವಳಿದಾರ ಅಥವಾ ಅಧಿಕೃತ ಹಿಡುವಳಿದಾರನಾಗಿದ್ದನೋ ಹೇಗೆ; ತರುವಾಯದ ಸಂದರ್ಭದಲ್ಲಿ ಮಾಡಿದ ಪರಭಾರೆಗಳ ವಇವರಗಳು ಮತ್ತು ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಅವುಗಳ ಸಿಂಧವಾಗಿದ್ದರ ಬಗ್ಗೆ ಇವುಗಳನ್ನು ತಿಳಿಸತಕ್ಕದ್ದು; ಮತ್ತು

(iv) 4ನೇ ನಿಯಮದ ಮೇರೆಗೆ ಅಧಿಭೋಗದ ಬೆಲೆಯನ್ನು ಜಮೆ ಮಾಡಿರುವುದಕ್ಕಾಗಿನ ಚಲನ್ ಅಥವಾ ಹಗೆ ಸಂದಾಯಕ್ಕಾಗಿ ವಿಚಾರಣೆಯಿಂದ ಪಡೆದ ರಸೀದಿ.

(3) ಡೆಪ್ಯೂಟಿ ಕಮೀಷನರನು ಅರ್ಜಿಯಲ್ಲಿ ಮಾಡಿಕೊಂಡ ಹೇಳಿಕೆಗಳ ಸತ್ಯದ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಂಡ ತರುವಾಯ ಭೂಮಿಯ ಮರುಮಂಜೂರಾತಿಗಾಗಿ ಆದೇಶಗಳನ್ನು ಮಾಎತಕ್ಕದು.

**5ಕ. ಅನಧಿಕೃತ ಹಿಡುವಳಿದಾರ ಅಥವಾ ಅಕ್ರಮ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯನ್ನು ಹೊರಹಾಕುವುದು:** (1) ಡೆಪ್ಯೂಟಿ ಕಮೀಷನರು, 5ನೇ ಪ್ರಕರಣದ (1)ನೇ ಉಪ–ಪ್ರರಕಣ ಅಥವಾ 7ನೇ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಯನ್ನು ಈ ಕೆಳಕಂಡ ರೀತಿಯಲ್ಲಿ ಹೊರಹಾಕುಬಹುದು. ಎಂದರೆ;

(i) ನೋಟಿಸನ್ನು ಜಾರಿ ಮಾಡಿದ ತರುವಾಯ ಅವನಿಗೆ ಯುಕ್ತವೆಂದು ಕಂಡು ಬರಬಹುದಾದಂಥ ಕಾಲದೊಳಗೆ ಭೂಮುಯನ್ನು ಖಾಲಿ ಮಾಡಲು ಸ್ವಾಧೀನದಲ್ಲಿರುವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡುವ ಮೂಲಕ : ಮತ್ತು

(ii) ಅಂಥ ನೋಟೀಸನ್ನು ಪಾಲಿಸದಿದ್ದರೆ, ಭೂಮಿಯನ್ನು ಖಾಲಿ ಮಾಡಲು ನಿರಾಕರಿಸಬಹುದಾದ ಯಾವನೆ ವ್ಯಕ್ತಿಯನ್ನು ತೆಗೆದುಹಾಕುವುದರ ಮೂಲಕ ಅಥವಾ ತೆಗೆದುಹಾಕುವಂತೆ ಮಾಡುವ ಮೂಲಕ ಮತ್ತು

(iii) ಅಂಥ ವ್ಯಕ್ತಿ ಅವರ ಪರವಾಗಿ ಯಾವನೇ ಇತರ ವ್ಯಕ್ತಿಯು ಅಂಥ ತೆಗೆದುಹಾಕುವಿಕೆಗೆ ಪ್ರತಿರೋಧಿಸಿದರೆ ಅಥವಾ ಅಡ್ಡಿಪಡಿಸಿದರೆ, ಅವನು ಆ ಪ್ರಕರಣದ ಸಂಗತಿಗಳ ಬಗ್ಗೆ ಕ್ಷಿಪ್ರ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅವನಿಗೆ ಆ ಪ್ರತಿರೋಧ ಅಥವಾ ಅಡ್ಡಿಯು ಯಾವುದೇ ನ್ಯಾಯ ಸಮ್ಮತ ಕಾರಣವಿಲ್ಲದ್ದು ಎಂದ ಉಮನದಟ್ಟಾದರೆ, ಅಂಥ ಪ್ರತಿರೋಧ ಅಥವಾ ಅಡ್ಡಿಗಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಂಥ ವ್ಯಕ್ತಿ ಅಥವಾ ಯಾವನೇ ಇತರ ವ್ತಕ್ತಿಯು ಹೊಣೆಗಾರನಾಗಬಹುದಾದಂಥ ಯಾವುದೇ ವ್ಯವಹರಣೆಗಳಿಗೆ ಬಾಧಕವಾಗದಂತೆ ಅಂಥ ಅಧಿಕಾರಿಯ ಅಭಿಪ್ರಾಯದಲ್ಲಿ ಆ ಆದೇಶದ ಪಾಲನೆಯನ್ನು ಸುನಿಶ್ಚಿಗೊಳಿಸುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದಕೊಳ್ಳವಂತೆ ಮಾಡಬಹುದು ಮತ್ತು ಅಂಥ ಬಲವನ್ನು ಬಳಸಬಹುದು ಅಥವಾ ಬಳಸುವಂತೆ ಮಾಡಬಹುದು.

(2) ಮೇಲಿನ ಉಪ–ನಿಯಮಕ್ಕೆ ಒಳಪಟ್ಟು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಉಪಬಂಧಗಳು ಅಂಥ ಹೊರಹಾಕುವಿಕೆಗೆ ಅನ್ವಯವಾಗತಕ್ಕುದು.

**6. 9ನೇ ಪ್ರಕರಣದ ಮೇರೆಗೆ ಪರಿಹಾರ ನೀರ್ಧರಣೆ:** 9ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಗ್ರಾಮ ಹುದ್ದೆಯ ಧಾರಕನು ಮಾಡಿಕೊಳ್ಳಬೇಕಾದ ಅರ್ಜಿಯು ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಯಲ್ಲಿರತಕ್ಕದ್ದು.

(2) ಡೆಪ್ಯೂಟಿ ಕಮೀಷನರನು. (1)ನೇ ಉಪ ನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸುನಾವಣೆಗಾಗಿ ಒಂದು ದಿನಾಂಕವನ್ನು ನಿಗದಿಪಡಿಸತಕ್ಕದು ಮತ್ತು ಅರ್ಜಿದಾರನಿಗೆ ಅದರ ಬಗ್ಗೆ ಕ್ರಮಬದ್ದ ನೋಟೀಸನ್ನು ಕೊಡತಕ್ಕುದು.

(3) ನಿಗದಿಪಡಿಸಿದ ದಿನಾಂಕದಂದು ಅಥವಾ ಆ ಪ್ರಕರಣವನ್ನು ಮುಂದೂಡಬಹುದಾದಂತ ಇತರ ದಿನಾಂಕದಂದು ಡೆಪ್ಯೂಟಿ ಕಮೀಷನರನು, ಸಂಹಿತೆಯ ಮೇರೆಗೆ ಕ್ಷಿಪ್ರ ವಿಚಾರಣೆಗಾಗಿ ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸತಕ್ಕುದು.

(4) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಗ) ಖಂಡದ ಉದ್ದೇಶಕ್ಕಾಗಿ, ಒಂದು ವರ್ಷದಲ್ಲಿ ಗ್ರಾಂ ಹುದ್ದೆಯ ಧಾರಕನು ವಿಧಿಸಿದ ಅಥವಾ ವಿಧಿಸಬಹುದಾದ ರೂಢಿಗತ ಶುಲ್ಕಗಳ ಅಥವಾ ಪರಿಲಬ್ಧಿಗಳ ಮೌಲ್ಯವನ್ನು ಗ್ರಾಮ ಹುದ್ದೆಯು ಇದ್ದಂಥ ತಾಲ್ಲೂಕಿಗಾಗಿನ ಬೆಲೆಯ ರಿಜಿಸ್ಟರಿನಲ್ಲಿ ಆ ವರ್ಷದ ಜನವರಿ ತಿಂಗಳಿಗಾಗಿ ದಾಖಲು ಮಾಡಿದಂತೆ ಅಂಥ ಶುಲ್ಕಗಳು ಅಥವಾ ಪರಿಲಬ್ಧಿಗಳಲ್ಲಿ ಒಳಗೊಳ್ಳುವ ಸರಕುಗಳ ಬೆಲೆಗಳ ಆಧಾರದ ಮೇಲೆ ನಿರ್ಧರಿಸತಕ್ಕುದು.

(5) ಡೆಪ್ಯೂಟಿ ಕಮೀಷನರನು. ಆದೇಶದ ಮೂಲಕ, 9ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅರ್ಜಿದಾರನಿಗೆ ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ಧರಿಸತಕ್ಕುದು. ಸಂದಾಯ ಮಾಡಬೇಕಾದ ಮೊಬಲಗನ್ನು ಡೆಪ್ಯೂಟಿ ಕಮೀಷನರನ ಸ್ವಂತ ಬರಹದಲ್ಲಿ ಅಂಕಿಗಳಲ್ಲಿ ಮತ್ತು ಪದಗಳಲ್ಲಿ ಬರೆಯತಕ್ಕದ್ದಯ. ಅವನು ಅದಕ್ಕೆ ಅವನ ರುಜುವನ್ನು ಹಾಕತಕ್ಕದ್ದು.

(6) ಯಾವುದೇ ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ (5)ನೇ ಉಪ–ನಿಯಮದ ಮೇರೆಗೆ ಸಂದಾಯ ಮಾಡಬೇಕೆಂದು ನಿರ್ಧರಿಸಿದ ಮೊಬಲಗು ಐದುನೂರು ರೂಪಾಯಿಗಳನ್ನು ಮೀರದಿದ್ದರೆ, ಅಂಥ ಮೊಬಲಗನ್ನು ಪೂರ್ಣವಾಗಿ ನಗದು ರೂಪದಲ್ಲಿ ಸಂದಾಯ ಮಾಡತಕ್ಕುದು. ಆ ಮೊಬಲಗು ಐದುನೂರು ರೂಪಾಯಿಗಳನ್ನನ ಮೀರಿದ ಸಂದರ್ಭದಲ್ಲಿ ಐದುನೂರು ರೂಪಾಯಿಗಳನ್ನು ನಗದು ರೂಪವಾಗಿ ಒಂದೇ ಕಂತಿನಲ್ಲಿ ಸಂದಾಯ ಮಾಡತಕ್ಕುದು ಮತ್ತು ಶಿಲ್ಕನ್ನು ಪ್ರತಿ ವರ್ಷಕ್ಕೆ ಶೇಕಡಾ ಮೂರರ ಬಡ್ಡಿಯೊಂದಿಗೆ ಮೂರು ವಾರ್ಷಿಕ ಕಂತುಗಳಲ್ಲಿ ಸಂದಾಯ ಮಾಡತಕ್ಕುದು.

**7. ವಿಚಾರಣೆಗಳನ್ನು ನಡೆಸುವಲ್ಲಿ ಡೆಪ್ಯೂಟಿ ಕಮೀಷನರನ ಅಧಿಕಾರಿಗಳು:** ಡೆಪ್ಯೂಟಿ ಕಮೀಷನರನು, ಈ ನಿಯಮಗಳ ಮೇರೆಗೆ ವಿಚಾರಣೆಗಳನ್ನು ನಡೆಸುವಲ್ಲಿ ಸಂಹಿತೆಯ ಮೇರೆಗೆ ವಿಧ್ಯುಕ್ತ ಅಥವಾ ಕ್ಷಿಪ್ರ ವಿಚಾರಣೆಯನ್ನು ನಡೆಸುವ ಕಂದಾಯ ಅಧಿಕಾರಿಗೆ ಪ್ರಧಾನ ಮಾಡಿದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಬಹುದು ಮತ್ತು ಅನುಸರಿಸಬೇಕಾದ ಪ್ರಕ್ರಿಯೆಯು, ಕಾರ್ಯಸಾಧ್ಯವಾದಷ್ಟು ಮಟ್ಟಿಗೆ. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ. 1908ರಲ್ಲಿ ನಿಯಮಿಸಿದ ಪ್ರಕ್ರಿಯೆಯಾಗಿರತಕ್ಕದು, ಎಂದರೆ:

(i) ಯಾವನೇ ವ್ಯಕ್ತಿಯನ್ನು ಕರೆಯುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಒಸುವು; ಮತ್ತು ಅವನನ್ನು ಪ್ರಮಾಣವಚನದ ಮೇಲೆ ಪರೀಕ್ಷಿಸುವುದು ಮತ್ತು;

(ii) ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಿತಿಸುವುದು.

## ನಮೂನೆ

## ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961ರ 9ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿನ ಅರ್ಜಿಯ ನಮೂನೆ

**(6ನೇ ನಿಯಮವನ್ನು ನೋಡಿ)**

ಕ. ಅರ್ಜಿದಾರನ ಪೂರ್ಣ ಹೆಸರು ಮತ್ತು ವಿಳಾಸ

ಖ. ಯಾವ ಗ್ರಾಮ ಹುದ್ದೆಯ ರದ್ದಿಯಾತಿಯು ಅಧಿನಿಯಮದ ಮೇರೆಗೆ ಪರಿಹಾರಕ್ಕೆ ಅರ್ಜೀದಾರನನ್ನು ಹಕ್ಕುಳ್ಳವನನ್ನಾಗಿ ಸಿರುವುದೋ ಆ ಗ್ರಾಮ ಹುದ್ದೆಯ ವಿವರಗಳು.

(ಕ) ಗ್ರಾಮ ಹುದ್ದೆಯು ಇದ್ದಂಥ ಗ್ರಾಂದ ಹೆಸರು

(ಖ) ಗ್ರಾಮ ಹುದ್ದೆಗೆ ಸಂಬಂಧಿದಿಂತೆ ಮಂಜೂರು ಮಾಡಿದ ಅಥವಾ ಮುಂದುವರಿಸಲಾದ ಅಥವಾ ಅದಕ್ಕೆ ಲಗತ್ತಿಸಲಾದ ಭೂವಿಗಳ ವಿವರಗಳು

(i) ಸರ್ವೆ ನಂಬರ್

(ii) ವಿಸ್ತೀರ್ಣ

(iii) ಕಂದಾಯ

(iv) ಸರ್ಕಾರಕ್ಕೆ ಸಂದಾಯ ಮಾಡುತ್ತಿದ್ದಂಥ ಜೋಡಿ ಅಥವಾ ಇತರ ಮೊಬಲಗುಗಳು

(ಗ) ನಗದು ಭತ್ಯದ ವಿವರಗಳು

(ಘ) ಬದಲಿ ಕಾರ್ಯನಿರ್ವಾಹಕನಿಗೆ ಸಂದಾಯ ಮಾಡುತ್ತಿದ್ದಂಥ, ಸಂದಾಯ ಮಾಡಬೇಕಾದ ಪರಿಶ್ರಮಧನದ ವಿವರಗಳು

(ಙ) ಗ್ರಾಮ ಹುದ್ದೆಯ ಧಾರಕನು ವಿಧಿಸಿದ ಅಥವಾ ವಿಧಿಸ ಬಹುದಾಗಿದ್ದ ರೂಢಿಗತ ಶುಲ್ಕಗಳು ಅಥವಾ ಪರಿಲಬ್ಧಿ ಗಳ ವಿವರಗಳು.

ಅರ್ಜಿದಾರನು ಧಾರಕನಾಗಿದ್ದಿದ್ದರೆ ಗ್ರಾಮ ಹುದ್ದೆಯಲ್ಲಿ ಅವನ ಪಾಲಿನ ವ್ಯಾಪ್ತಿ.

ಗ. ಕ್ಲೇಮುಮಾಡಲಾದ ನಷ್ಟ ಪರಿಹಾರ:

(i) ಹಿಡುವಳಿದಾರನ ಉಪಲಬ್ಧಿಗಳ ಬಗ್ಗೆ ವಹಿಸಿಕೊಡ ಲಾಗಿದ್ದಂಥ ಭೂಮಿಯಲ್ಲಿನ ಹಿಡುವಳಿದಾರನ ಹಕು ಗಳನ್ನು ಅಂತ್ಯಗೊಳಿಸುವುದಕ್ಕಾಗಿ ಭೂಮಿಗಳ ವಿವರಗಳು: ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣ, ಕಂದಾಯ, ಜೋಡಿ, ಕ್ಲೇಮುಮಾಡಲಾದ ನಷ್ಟ ಪರಿಹಾರದ ಮೊಬಲಗು.

(ii) ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಹಿಡುವಳಿದಾರನಿಗೆ ರಾಜ್ಯ ಸರ್ಕಾರವು ಕೊಟ್ಟವಾರ್ಷಿಕ ನಗದು ಭತ್ಯ ಅಥವಾ ಇತರ ವಾರ್ಷಿಕ ಹಣದ ಸಂದಾಯದ (ಪುನಃ ವಶಪಡಿಸಿಕೊಂಡ ಭೂಮಿಗಳ ಬಗ್ಗೆ ಬಾಡಿಗೆಯ ಮೂಲಕ ವಲ್ಲದ್ದು) ವಾರ್ಷೀಕ ನಗದು ಭತ್ಯ ಅಥವಾ ಇತರ ಸಂದಾಯದ ಮೊಬಲಗು: ಆ ಮೊಬಲಗನ್ನು ಸ್ವೀಕರಿಸಲಾದಂಥ ಖಜಾನೆ.

(iii) ರೂಢಿಗಳ ಶುಲ್ಕಗಳು ಅಥವಾ ಪರಿಲಬ್ಧಿಗಳ ಬಗ್ಗೆ ಹಕ್ಕುಗಳನ್ನು ಅಂತ್ಯಗೊಳಿಸುವುದಕ್ಕಾಗಿ:

ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದ ಮೂರು ವರ್ಷಗಳ ಪ್ರತಿಯೊಂದರಲ್ಲಿ ವಿಧಿಸಿದ ಅಥವಾ ವಿಧಿಸಬಹುದಾಗಿದ್ದಂಥ ರೂಢಿಗತ ಶುಲ್ಕಗಳು ಅಥವಾ ಪರಿಲಬ್ಧಿಗಳ ವಿವರಗಳು:

ನಗದು ರೂಪದಲ್ಲಿ

| ವರ್ಷ | ವಿಧಿಸಲಾದ ಮೊಬಲಗು | ವಿಧಿಸಬಹುದಾಗಿದ್ದಂಥ ಆದರೆ ವಿಧಿಸದೆ ಇರುವ ಮೊಬಲಗು |
|---|---|---|
| 1 | 2 | 3 |

ವಸ್ತು ರೂಪದಲ್ಲಿ

| ವರ್ಷ | ವಿಧಿಸಲಾದುದರ ವಸ್ತು ರೂಪ, ಪರಿಮಾಣ | ವಿಧಿಸಬಹುದಾಗಿದ್ದಂಥ ಆದರೆ ವಿಧಿಸದೆ ಇರುವ ಇತರ ಪರಿಮಾಣ | ವಿಧಿಸಲಾದ ಮೊಬಲಗಿನ ಮತ್ತು ವಿಧಿಸಬಹುದಾದ ಆದರೆ ವಿಧಿಸಿಲ್ಲದ ಮೊಬಲಗಿನ ಅಂದಾಜು ಮಾಡಿದ ನಗರು ಮೌಲ್ಯ |
|---|---|---|---|
| 1 | 2 | 3 | 4 |

(iv) ಇತರ ಹಕ್ಕುಗಳನ್ನು ಅಂತ್ಯಗೊಳಿಸುವುದಕ್ಕಾಗಿ ಅಥವಾ ಏರ್ಪಾಡು ಮಾಡುವುದಕ್ಕಾಗಿ.

ಮಾರ್ಪಾಟು ಮಾಡಿದ ಅಥವಾ ಅಂತ್ಯಗೊಳಿಸಿದ ಹಕ್ಕುಗಳ ವಿವರಗಳು.

ಕ್ಲೇಮು ಮಾಡಿದ ನಷ್ಟ ಪರಿಹಾರದ ಮೊಬಲಗು.

ಯಾವ ಆಧಾರಗಳ ಮೇಲೆ ನಷ್ಟ ಪರಿಹಾರವನ್ನು ಕ್ಲೇಮು ಮಾಡಿದೆಯೋ ಆ ಆಧಾರಗಳು3

(v) ಕ್ಲೇಮು ಮಾಡಲಾದ ನಷ್ಟ ಪರಿಹಾರದ ಒಟ್ಟು ಮೊಬಲಗು

(i), (ii), (iii), ಮತ್ತು (iv)

---

....................................................................ಆದ ನಾನು.................................................ಇದು ನನಗೆ ತಿಳಿಸಿರುವಷ್ಟರ ಮಟ್ಟಿಗ ಮತ್ತು ನಾನು ನಂಬುವಷ್ಟರ ಮಟ್ಟಿಗೆ ಸತ್ಯವಾಗಿದೆಯೆಂದು ಘೋಷಿಸುತ್ತೇನೆ.

ಸ್ಥಳ:

ದಿನಾಂಕ: ಅರ್ಜಿದಾರನ ಸಹಿ

## ಕರ್ನಾಟಕ ಸಾಮಾನ್ಯ ಸೇವಾ (ಕಂದಾಯ ಅಧೀನ ಶಾಖೆ) ಗ್ರಾಮಲೆಕ್ಕಿಗರ (ನೌಕರಿಭರ್ತಿ) ನಿಯಮಗಳು, 1970

### ನಿಯಮಗಳ ಅನುಕ್ರಮಣಿಕೆ

### ಪ್ರಸ್ತಾವನೆ

**ನಿಯಮಗಳು:**

1. ಹೆಸರು ಮತ್ತು ಪ್ರಾರಂಭ
2. ಗ್ರಾಮಲೆಕ್ಕಿಗರ ಕೇಡರ್
3. ನೇಮಕ ಮಾಡುವ ಪ್ರಾಧಿಕಾರಿ
4. ನೌಕರುಭರ್ತಿ
5. ಆಯ್ಕೆಗಾಗಿನ ಸಮಿತಿ
6. ಪ್ರೊಬೇಷನ್ (ತೆಗೆದುಹಾಕಲಾಗಿದೆ)
7. ತರಬೇತಿ
8. ಗ್ರಾಮಲೆಕ್ಕಿಗರು ಬಂಧಪತ್ರವನ್ನು ಬರೆದುಕೊಡತಕ್ಕದು.

8ಕ. ಪಂಚಾಯತಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಹೊಣೆಗಾರಿಕೆ

9. ಸಾಮಾನ್ಯ ನೌಕರಿಭರ್ತಿ ನಿಯಮಗಳ ಅನ್ವಯ
10. ಇತರ ನಿಯಮಗಳ ಅನ್ವಯ
11. ನಿರಸನ ಮತುತ ಉಳಿಸುವಿಕೆಗಳು

**ಕಂದಾಯ ಸಾಮಾನ್ಯ ಸೇವಾ (ಕಂದಾಯ ಅಧೀನ ಶಾಖೆ) ಗ್ರಾಮಲೆಕ್ಕಿಗರ**

**(ನೌಕರಿಭರ್ತಿ) ನಿಯಮಗಳು. 1970**

**ಅಧಿಸೂಚನೆ**

**ಸಂಖ್ಯೆ: ಆರ್‌ಡಿ 173 ಎಂವಿಎಸ್ 68, ದಿನಾಂಕ ಬೆಂಗಳೂರು 25ನೇ ಮಾರ್ಚ್ 1970**

ಕರ್ನಾಟಕ ಭೂಕಂದಾಯ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 12) 16 ಮತ್ತು 197ನೇ ಪ್ರಕರಣಗಳ ಮೂಲಕ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿಮ ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ; ಅವುಗಳ ಕರಡನ್ನು ಸದರಿ 197ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ 1970ರ ಮಾರ್ಚ್ 5ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ ಭಾಗ ೫೧ ವಿಭಾಗ (2)ಗ(೬)ರಲ್ಲಿ 1970ರ ಫೆಬ್ರವರಿ 24ನೇ ದಿನಾಂಕದ ಜಿಎಸ್‌ಆರ್ 70 (ಆರ್‌ಡಿ 173 ಎಂವಿಎಸ್ 68)ದ ಅಧಿಸೂಚನೆಯಲ್ಲಿ ಈ ಹಿಂದೆ ಪ್ರಕಟಿಸಲಾಗಿದೆ ಎಂದರೆ:

**1. ಹೆಸರು ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವಾ (ಕಮದಾಯ ಅಧೀನ ಶಾಖೆ) ಗ್ರಾಮ ಲೆಕ್ಕಿಗರ (ನೌಕರಿಭರ್ತಿ) ನಿಯಮಗಳು, 1970 ಎಂದು ಕರೆಯತಕ್ಕುದು.

(2) ಅವು ಕರ್ನಾಟಕ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಗ್ರಾಮಲೆಕ್ಕಿಗರ ಕೇಡರ್:** ಗ್ರಾಮ ಲೆಕ್ಕಿಗರ ಕೇಡರ್ ಜಿಲ್ಲಾವಾರು ಆಗಿರತಕ್ಕದ್ದು ಮತ್ತು ಅದರ ವೇತನ ಶ್ರೇಣಿಯು ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂತೆ ಇರತಕ್ಕುದು.

**3. ನೇಮಕ ಮಾಡುವ ಪ್ರಾಧಿಕಾರಿ:** ಗ್ರಾಮಲೆಕ್ಕಿಗನಿಗೆ ಸಂಬಂಧಿಸಿದಂತೆ ನೇಮಕ ಮಾಡುವ ಪ್ರಾಧಿಕಾರಿಯು ಜಿಲ್ಲೆಯ ಡೆಪ್ಯೂಟಿ ಕಮೀಷನರಾಗಿರತಕ್ಕದು.

4. ನೌಕರಿ ಭರ್ತಿ: (1) ಗ್ರಾಮ ಲೆಕ್ಕಿಗರ ಕೇಡರಿಗೆ ನೌಕರಿಭರ್ತಿಯನ್ನು

(i) ಗ್ರಾಮ ಅಧಿಕಾರಿಗಳಾಗಿ ಸೇವೆಸಲ್ಲಿಸಿರುವ ವ್ಯಕ್ತಿಗಳು,

(1ಕ) * * *

(ii) ಎಸ್‌ಎಸ್‌ಎಲ್‌ಸಿ ಪರೀಕ್ಷೆ ಅಥವಾ ರಾಜ್ಯಸರ್ಕಾರವು ಅದಕ್ಕೆ ಸಮಾನವಾದುದೆಂದು ಘೋಷಿಸಿದ ಯಾವುದೇ ಇತರ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ನೌಕರಿ ಭರ್ತಿಯ ಕಾಲದಲ್ಲಿ ಜಾರಿಯಲ್ಲಿದ್ದ ನಿಯಮಗಳಿನುಸಾರವಾಗಿ ಪಂಚಾಯತಿ ಕಾರ್ಯದರ್ಶಿಗಳೆಂದು ಕ್ರಮಬದ್ಧವಾಗಿ ನೌಕರು ಭರ್ತಿಯಾಗಿರುವ ಮತ್ತು ಪಂಚಾಯತಿ ಕಾರ್ಯದರ್ಶಿಗಳೆಂದು ಕೆಲಸ ಮಾಡುತ್ತಿರುವ ವ್ಯಕ್ತಿಗಳು.

(i) (ಕ) ಮಾಧ್ಯಮಿಕ ಶಾಲೆಗಳ ಪರೀಕ್ಷೆ ಅಥವಾ ರಾಜ್ಯ ಸರ್ಕಾರವು ಅದಕ್ಕೆ ಸಮವಾದುದೆಂದು ಘೋಷಿಸಿದ ಯಾವುದೇ ಇತರ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ;

(ಖ) (ii) ನೆಯದರ ಅಡಿಯಲ್ಲಿ ಅರ್ಹ ವ್ಯಕಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿದ್ದರೆ ಸಂದರ್ಭಾನುಸಾರ, ಪಂಚಾಯತಿ ಕಾರ್ಯದರ್ಶಿಗಳೆಂದು 10 ವರ್ಷಗಳಿಗೆ ಕಡಿಮೆ ಇಲ್ಲದ ಸೇವೆ ಸಲ್ಲಿಸಿರುವ:

ನೌಕರಿಭರ್ತಿಯ ಕಾಲದಲ್ಲಿ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಕ್ರಮಬದ್ಧವಾಗಿ ಪಂಚಾಯತಿ ಕಾರ್ಯದರ್ಶಿಗಳೆಂದು ಕೆಲಸ ಮಾಡುತ್ತಿರುವ ವ್ಯಕ್ತಿಗಳು;

(iv) (o o o)

(v) ಮೇಲೆ ಹೇಳಲಾದ ಯಾವುದೇ ಪ್ರವರ್ಗದ ಅಡಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲ ಇವ್ಯಕ್ತಿಗಳು ಲಭ್ಯವಿಲ್ಲದಿದ್ದರೆ ಇತರರು–

ಇವರಿಂದ ನೇರ ನೌಕರಿಭರ್ತಿಯ ಮೂಲಕ ಮಾಡತಕ್ಕದ್ದು.

(2) (i) ನೇ ಉಪನಿಯಮದ (ii) ಮತ್ತು (iii)ನೇ ಪ್ರವರ್ಗಗಳಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳನ್ನು ಹೊರತುಪಡಿಸಿ, ಯಾವನೇ ವ್ಯಕ್ತಿಯು ಅವನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಅಥವಾ ಅದಕ್ಕೆ ಸಮಾನವಾದುದೆಂದು ರಾಜ್ಯ ಸರ್ಕಾರವು ಘೋಷಿಸಿದ ಯಾವುದೇ ಇತರ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಹೊರತು. ಈ ನಿಯಮಗಳ ಮೇರೆಗೆ ನೇಮಕಾತಿಗಾಗಿ ಅರ್ಹನಾಗಿರತಕ್ಕದ್ದಲ್ಲ.

(3) (i) ನೇ ಉಪ–ಪ್ರಕರಣದ ಮೇರೆಗೆ ನೇಮಕಾತಿಗಾಗಿ ವಯೋಮಿತಿಯು

(i) ಯಾವುದೇ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಯ ಸಂದರ್ಬದಲ್ಲಿ 33 ವರ್ಷಗಳು; ಮತ್ತು

(ii) ಇತರರ ಸಂದರ್ಭದಲ್ಲಿ 28 ವರ್ಷಗಳು ಆಗಿರತಕ್ಕುದು.

ಪರಂತು, ಗ್ರಾಮ ಅಧಿಕಾರಿಯಾಗಿ ಅಥವಾ ಪಂಚಾಯತಿ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಯ ಸಂದರ್ಬದಲ್ಲಿ ಅಂಥ ವಯಸ್ಸು 1ನೇ ಏಪ್ರಿಲ್ 1967ರಂದು 50 ವರ್ಷಗಳನ್ನು ಮೀರತಕ್ಕುದಲ್ಲ;

ಮತ್ತೂ ಪರಂತು, ಸ್ಥಳೀಯ ಅಭ್ಯರ್ಥಿಗಳ ಸಂದರ್ಭದಲ್ಲಿ ಅಂಥ ವಯಸ್ಸು 1ನೇ ಜನವರಿ 1965 ರಂದು ಇದ್ದಂತೆ ಇತರಕ್ಕದ್ದು.

**ವಿವರಣೆ**:– ಈ ನಿಯಮದ ಉದ್ದೇಶಗಳಿಗಾಗಿ "ಗ್ರಾಮ ಅಧಿಕಾರಿ" ಎಂದರೆ, ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961ರ ಕರ್ನಾಟಕ ಅಧಿನಿಯಮ (1961ರ ಸಂಖ್ಯೆ 14)ರಲ್ಲಿ ಪರಿಭಾಷಿಸಿದಮತೆ "ಕೆಳದರ್ಜೆಯ ಗ್ರಾಮಹುದ್ದೆ" ಯನ್ನು ಹೊರತುಪಡಿಸಿ, ಗ್ರಾಮ ಹುದ್ದೆಯನ್ನು ಧಾರಣ ಮಾಡಿದ್ದ ವ್ಯಕ್ತಿ.

**5. ಆಯ್ಕೆಗಾಗಿ ಸಮಿತಿ: (1).**

**ಅಧ್ಯಕ್ಷ:**

(i) ಜಿಲ್ಲೆಯ ಡೆಪ್ಯೂಟಿ ಕಮೀಷನರ್.

**ಸದಸ್ಯ ಕಾರ್ಯದರ್ಶಿ**

(ii) ಜಿಲ್ಲೆಯ ಡೆಪ್ಯೂಟಿ ಕಮಿಷನರ ಕೇಂದ್ರ ಕಾರ್ಯಸ್ಥಾನದ ಸಹಾಯಕ

**ಸದಸ್ಯರು**

(iii) ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರನ್ನು ಮೀರದ ಸದಸ್ಯರು ಅವರ ಪೈಕಿ ಒಬ್ಬನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಯಾಗಿರತಕ್ಕುದು ಮತ್ತು ಒಬ್ಬನು ಆ ಜಿಲ್ಲೆಯಲ್ಲಿ ಸಮಾಜ ಸೇವೆಯಲ್ಲಿ ವಿಶೇಷ ಜ್ಞಾನ ಅಥವಾ ವ್ಯಾವಹಾರಿಕ ಅನುಭವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕುದು ಮತ್ತು ಇನ್ನೊಬ್ಬನು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವನಾಗಿರತಕ್ಕುದು.

ಇವರುಗಳನ್ನು ಒಳಗೊಂಡ ಸರ್ಕಾವರು ರಚಿಸತಕ್ಕಂಥ ಪ್ರತಿಯೊಂದು ಜಿಲ್ಲೆಗಾಗಿ ಒಂದು ಆಯ್ಕೆ ಸಮಿತಿ ಇರತಕ್ಕದ್ದು.

(2) ಸಮಿತಿಯು ಗ್ರಾಮ ಲೆಕ್ಕಿಗರೆಂದು ನೇಮಕ ಮಾಡುವುದಕ್ಕಾಗಿ ಅರ್ಜಿಗಳನ್ನು ಕರೆಯತಕ್ಕದು ಮತ್ತು ಆ ಆಯ್ಕೆಯನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಆಯ್ಕೆಯ ಮೂಲಕ ನೌಕರಿಭರ್ತಿ) ನಿಯಮಗಳ 1967 ಇದರಲ್ಲಿ ವಿಧಿಸಿರುವ ರೀತಿಯಲ್ಲಿ ಆಯ್ಕೆಯನ್ನು ಮಾತಕ್ಕದು.

(3) ಸಮಿತಿಯ ತೀರ್ಮಾನವು ಡಿವಿಜನಲ್ ಕಮೀಷನರ್ ಅನುಮೋದನೆಗೆ ಒಳಪಟ್ಟು ಅಂತಿಮವಾಗಿರತಕ್ಕದು.

(4) ಡಿವಿಜನಲ್ ಕಮೀಷನರನು ಅನುಮೋದಿಸಿದ ಪಟ್ಟಿಯನ್ನು ಪ್ರಕಟಿಸತಕ್ಕುದು ಮತ್ತುಸದರಿ ಪಟ್ಟಿಯಲ್ಲಿ ಆಐಕೆ ಮಾಡಿದ ವ್ಯಕ್ತಿಗ್ಳ ಹೆಸರುಗಳನ್ನು ವ್ಯವಸ್ಥೆ ಮಾಡಿರವಂಥ ಕ್ರಮದಲ್ಲಿ ನೇಮಕಾತಿಗಳನ್ನು ಮಡತಕ್ಕುದು.

6. **ಪ್ರೋಬೇಷನ್** (ಂ ಂ ಂ)

7. **ತರಬೇತಿ:** ಗ್ರಾಮಲೆಕ್ಕಿಗನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರೊಬೇಷನ್ನಿನ ಅವಧಿಯಲ್ಲಿ ರಾಝ್ಯ ಸರ್ಕಾರವು ನಿರ್ಧರಿಸಬಹುದಾದ ಮೂರು ತಿಂಗಳಗಳನ್ನು ಮೀರದ ಅವಧಿಗಾಗಿ ತರಬೇತಿಯ ಕ್ರಮ ಮತ್ತು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕೆಂದು ಅಗತ್ಯಪಡಿಸಬಹುದು.

**ಪರಂತು:** 11ನೇ ನಿಯಮದ (1)ನೇ ಉಪ–ನಿಯಮದ ಮೇರೆಗೆ ನಿರಸನಗೊಳಿಸಲಾದ ನಿಯಮಗಳ 12ನೆ ನಿಯಮದ ಮೇರೆಗಿನ ತರಬೇತಿಯನ್ನು ಯಶಸ್ವಿಯಾಗಿ ಮುಗಿಸಲಾಗಿರುವ ವ್ಯಕ್ತಿಗಳನ್ನು ತರಬೇತಿ ಪಡೆಯಲು ಅಗತ್ಯಪಡಿಸತಕ್ಕುದಲ್ಲ.

8. **ಗ್ರಾಮಲೆಕ್ಕಿಗರು ಬಂಧಪತ್ರವನ್ನು ಬರೆದುಕೊಡತಕ್ಕದು:** (1) ಗ್ರಾಮ ಲೆಕ್ಕಿಗನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು ನಗದು ರೂಪದಲ್ಲಿ ಅಇತರ ಬೆಲಕೆಬಾಳುವ ಭದ್ರತೆಯ ರೂಪದಲ್ಲಿ ಮೂರುನೂರು ರೂಪಾಯಿಗಳ ಭದ್ರತೆಯನ್ನು ಒದಗಿಸತಕ್ಕದು ಅಥವಾ ಸದರಿ ಮೊಬಲಗಿಗಾಗಿ ಜಾಮೀನುದಾರನೊಂದಿಗೆ ಬಂಧಪತ್ರವನ್ನು ಬರೆದುಕೊಡತಕ್ಕದ್ದು.

**ವಿವರಣೆ:** ಈ ಉಪನಿಯಮದಲ್ಲಿ ''ಬೆಲೆಬಾಳುವ ಭದ್ರತೆ' 'ಎಂದರೆ ಅಂಚೆ ಕಛೇರಿ ಉಳಿತಾಯಗಳ ಬ್ಯಾಂಕ್ ಠೇವಣಿ ಸರ್ಕಾರಿ ಪ್ರಾಮಿಸರಿ ನೋಟ್‌ಗಳ ಅಥವಾ ರಾಷ್ಟ್ರೀಯ ಅಥವಾ ಅಂಚೆ ಕಛೇರಿ ಉಳಿತಾಯ ಪ್ರಮಾಣ ಪತ್ರಗಳು.

(2) (1)ನೇ ಉಪನಿಯಮದ ಉಪಬಂಧಗಳನ್ನು ಪಾಲಿಸಲು ತಪ್ಪುವ ವ್ಯಕ್ತಿಗಳನ್ನು ಸೇವೆಯಿಂದ ತೆಗೆದುಹಾಕಲು ಗುರಿಯಾಗಿರತಕ್ಕುದು.

8ಕ. **ಪಂಚಾಯತಿ ಕಾರ್ಯದಶಿಯಾಗಿ ಸೇವೆ ಸಲ್ಲಿಸಲು ಹೊಣೆಗಾರಿಕೆ:** ಹನ್ನೆರಡು ಸಾವಿರ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಗ್ರಾಮ ಪಂಚಾಯಿತಿಗಾಗಿ ಪ್ರತ್ಯೇಕ ಪಂಚಾಯತಿ ಕಾರ್ಯದರ್ಶಿಯನ್ನು ನೇಮಕ ಮಾಡಿಲ್ಲದೆ ಇರುವಲ್ಲಿ ಸದರಿ ಪಂಚಾಯತಿಯ ಇರುವ ಗ್ರಾಮದ ಗ್ರಾಮಲೆಕ್ಕಿಗನು ಹಾಗೆ ನೇಮಕ ಗೊಂಡರೆ, ಅವನು ಸದರಿ ಪಂಚಾಯತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕುದು.

9. **ಸಾಮಾನ್ಯ ನೌಕರಿಭರ್ತಿ ನಿಯಮಗಳ ಅನ್ವಯ:** ಈ ನಿಯಮಗಳಲ್ಲಿ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಮಾಡಲಾಗಿದೆಯೋ ಆ ವಿಷಯಗಳನ್ನು ಹೊರತುಪಡಿಸಿ, ಕರ್ನಾಟಕ ರಾಜ್ಯ

ಸಿವಿಲ್ ಸೇವಾ (ಸಾಮಾನ್ಯ ನೌಕರಿಭರ್ತಿ) ನಿಯಮಗಳು, 1957ರ ಉಪಬಂಧಗಳು, ಈ ನಿಯಮಗಳ ಮೇರೆಗಿನ ನೌಕರಿಭರ್ತಿಯ ಉದ್ದೇಶಗಳಿಗಾಗಿ ಅನ್ವಯವಾಗತಕ್ಕದ್ದು.

**10. ಇತರ ನಿಯಮಗಳ ಅನ್ವಯ :** (1) ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಕರ್ನಾಟಕ ಸಿವಿಲ್ ಸೇವಾ (ವರ್ತನೆ) ನಿಯಮಗಳು, 1966 ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ನಿಯಮಗಳು, ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಮೇರೆಗೆ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ನಿಯಂತ್ರಿಸಲು ಕಾಲಕಾಲಕ್ಕೆ ಮಾಡಬಹುದಾದಂಥ ಇತರ ನಿಯಮಗಳು ಮತ್ತು ತಿದ್ದುಪಡಿಗಳೊಂದಿಗೆ ಈ ನಿಯಮಗಳ ಉಪಬಂಧಗಳಿಗೆ ಅವುಗಳು ಅಸಂಗತವಾಗದಿರುವಷ್ಟರ ಮಟ್ಟಿಗೆ ಈ ನಿಯಮಗಳ ಮೇರೆಗೆ ನೌಕರಿ ಭರ್ತಿ ಮಾಡಿಕೊಂಡ ವ್ಯಕ್ತಿಗಳಿಗೆ ಅನ್ವಯವಾಗತಕ್ಕುದು.

(2) ಈ ನಿಯಮಗಳ ಮೇರೆಗಿನ ನೇಮಕಾತಿಗಳು, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಲು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿನ ಹುದ್ದೆಗಳ ಮೀಸಲಾತಿಯ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳಿಗೆ ಒಳಪಟ್ಟಿರತಕ್ಕುದು.

**11. ನಿರಸನ ಮತ್ತು ಉಳಿಸುವಿಕೆಗಳು:** (1) ಕರ್ನಾಟಕ ಸಾಮಾನ್ಯ ಸೇವಾ (ಕಂದಾಯ ಅಧೀನ ಶಾಖೆ) ಗ್ರಾಮಲೆಕ್ಕಿಗರ (ಕೇಡರ್ ಮತ್ತು ನೌಕರಿಭರ್ತಿ) ನಿಯಮಗಳು, 1961 ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಅಂಥ ನಿರಸನವು, ಸದರಿ ನಿಯಮಗಳು, ಜಾರಿಯಲ್ಲಿದ್ದ ಅವಧಿಯಲ್ಲಿ ಸದರಿ ನಿಯಮಗಳಿಗೆ ಅನುಸಾರವಾಗಿ ನೇಮಕಗೊಂಡ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸದರಿ ನಿಯಮಗಳ ಪೂರ್ವ ಪ್ರವರ್ತನೆಗೆ ಬಾಧಕವನ್ನುಂಟುಮಾಡತಕ್ಕುದಲ್ಲ.

(2) ಈ ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ (1)ನೇ ಉಪನಿಯಮದ ಮೇರೆಗೆ ನಿರಸನಗೊಳಿಸಿದ ನಿಯಮಗಳ 11ನೇ ನಿಯಮಕ್ಕೆ ಅನುಸಾರವಾಗಿ ಕಮೀಷನರನು ಆಯ್ಕೆ ಮಾಡಿದ ಮತ್ತು ಅನುಮೋದಿಸಿದ ವ್ಯಕ್ತಿಗಳ ಪಟ್ಟಿಯನ್ನು ಈ ನಿಯಮಗಳ 5ನೇ ನಿಯಮಕ್ಕೆ ಅನುಸಾರವಾಗಿ ಡಿವಿಜನಲ್ ಕಮೀಷನರು ಆಯ್ಕೆ ಮಾಡಿದ ಮತ್ತು ಅನುಮೋದಿಸಿದ ವ್ಯಕ್ತಿಗಳ ಪಟ್ಟಿಯಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ನೇಮಕಾತಿಗಳನ್ನು ಅಂತಹ ಪಟ್ಟಿಗಳಿಂದ ಸದರಿ 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮಾಡತಕ್ಕದ್ದು.

****